REGISTERED No. M. 2206 ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ REGISTERED No. M. 2206.

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಸಂಕಜಾತಜನಿತಾಃ ಪಂಚಾಕ್ಷರೀರಾಧಿನಃ ; ಪಂಚಕ್ಲೇಶವಿನಾಶಕಾಃ ಪಡಶಕ್ತೀಸಂಜಲಿಂಗೋದ್ಧವಾಃ ||

ಪಂಚಾಚಾರನಿಯಾಮಕಾಃ ಪರಂಶಕ್ತ್ಯಂಚಾಕ್ಷರೀಮೋದ್ಧಕಾಃ | ಪಂಚಾಚಾರ್ಯಜಗದ್ಗುರೂತ್ತಮವರಾಃ ಪಾಲಿಪ್ಪುರೀಲೋಕಮಂ ||

ಸಂಪಾದಕರು:—ಆಸ್ಥಾನ ವಿದ್ವಾನ್ ಸೆ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ

ಸಂಪುಟ ೧.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨ನೇ ಜನವರಿ ೧೯೨೮ [ಸಂಚಿಕೆ ೩೪.

OM

Rare opportunity! Don't miss!!

LOANS

without interest granted to our Bond holders on personal security.

Amount already advanced exceed Rs 47,000.

NEXT DATE FOR DETERMINATION OF LOANS 31-1-1927

For particulars apply with one anna postage at once to

M. RANGASAMI,

Organizing Representative, Mysore & Madras, 389, Bandikere, Mysore.

ದತ್ತವಿಧಾನಕಾರ್ಯವು

ರಾಮದುರ್ಗ ಸಂಸ್ಥಾನದಪೈಕಿ ಮುಳ್ಳೂರ ಗ್ರಾಮದಲ್ಲಿ ಇಲ್ಲಿಯ ಶ್ರೀಯುತ ಪಾಟೀಲ ಬಸವನಗೌಡರಿಗೆ ಸಂತತಿ ಇಲ್ಲದ್ದರಿಂದ ಇವರ ಮುಂದಿನ ಸಂತಾನವೃದ್ಧಿಗಾಗಿ ಬಸವನಗೌಡರು ಸಗೋತ್ರಸಂಪನ್ನರಾದ ಇದು ಒಂದಿ ಸಂಸ್ಥಾನದ ಪೈಕಿ ಯಲಿವಾಳ ಸಂಗಪ್ಪನವರ ಪುತ್ರ ವೀರಯ್ಯನನ್ನು ತಮ್ಮ ದತ್ತಪುತ್ರನನ್ನಾಗಿ ಮೊದಲೇ ನಿಯಮಿಸಿಕೊಂಡ ಪ್ರಕಾರ ಇದೇ ಮಾರ್ಗಶೀರ್ಷ ಕೃ|| ಪಕ್ಷ ೯ ಶನಿವಾರ ತಾ|| ೧೭-೧೨-೨೭ನೇ ದಿವಸ ಹಗಲು ವೃಷಭಲಗ್ನದಲ್ಲಿ ಹೂಲಿ ಬೃಹನ್ಮಠದ ವೇ|| ಶಾಂತಿ ಶಿವಬಸವಶಾಸ್ತ್ರಿಗಳ ಆಚಾರ್ಯತ್ವದ ಕೆಳಗೆ ದತ್ತಸ್ವೀಕಾರಕಾರ್ಯವು ವಿಧಾನೋಕ್ತವಾಗಿ ಜರುಗಿಸಲ್ಪಟ್ಟಿತು. ಈ ಕಾರ್ಯಕ್ಕೆ ಬಂದ ಮಾಹೇಶ್ವರ ವರ್ಗದವರಿಗೆ ಅನ್ನ ಸಂತರ್ಪಣೆಯೂ ಯಥೋಚಿತ ದಕ್ಷಿಣೆಯೂ ಸಹ ಕೊಡಲ್ಪಟ್ಟಿತು.

ಶ್ರೀಯುತ ಬಸವನಗೌಡರು ಹೂಲಿಥಮಾರ್ಥ ಶಾಲೆಗೆ ಹತ್ತು ರೂಪಾಯಿಗಳನ್ನೂ ಪಂಚಾಚಾರ್ಯಪ್ರಭಾ ಪೋಷಣಕ್ಕಾಗಿ ೫ ರೂಪಾಯಿಗಳನ್ನೂ ಕಾಣಿಕಾ ರೂಪವಾಗಿ ಕೊಟ್ಟರು. ಪಂಚಾಚಾರ್ಯಪ್ರಭೆಗೆ ರೂಪಾಯಿಗಳನ್ನು ಮುಟ್ಟಿಸುವಂತೆ ಶ್ರೀಯುತ ಬಸವನಗೌಡರು ಪಾಟೀಲ ಬೆಳ್ಳಿ ಇವರಿಗೆ ಒಪ್ಪಿಸಿದರು. ಈ ಕಾರ್ಯಕ್ಕೆ ರಾಮದುರ್ಗ ಸಂಸ್ಥಾನದ ರಾ|| ಸಾ|| ನಾಮಜೋಶಿ ಸಾಹೇಬರೂ, ಆಜುಬಾಜು ಗ್ರಾಮಗಳ ಪುರಪ್ರಮುಖರೂ, ಪಾಟೀಲ ಕುಲಕರ್ಣಿಗಳೂ ಸಹ ಬಂದಿದ್ದರು. ಮತ್ತು ಊರೊಳಗಿನ ಯಾವತ್ತು ಜನರೂ ಆಗಮಿಸಿದ್ದರು. ಶ್ರೀಯುತ ಬಸವನಗೌಡರ ಸಂತತಿಯು ಮುಂದೆ ವೃದ್ಧಿಯಾಗಿ ಅವರಂತೆ ಸಾರ್ವಜನಿಕ ಕಾರ್ಯವನ್ನು ಮಾಡುವಂತೆ ಪರಮಾತ್ಮನು ಆಶೀರ್ವದಿಸಲೆಂದು ಕೋರುವೆನು

ಒಬ್ಬ ಪ್ರತ್ಯಕ್ಷದರ್ಶಿ.

ಧರ್ಮಾರ್ಥ ಮಾಹೇಶ್ವರದೀಕ್ಷಾ ಸಮಾರಂಭ.

ಕಾತ್ರ್ಯಾಯಿನಿಮಡಿ ಕಡ್ಲಬಾಳು ವೇ|| ಸಂಗನಬಸಪ್ಪಯ್ಯನವರು ತಮ್ಮ ಮನದಲ್ಲಿ ನಂಜನಗೂಡು ತಾಲ್ಲೂಕಿನವರಾದ ಮಾಹೇಶ್ವರವಟುಗಳಿಗೆ ಶಿವದೀಕ್ಷೆಯನ್ನು ಮಾಡಿಸಿ ಧನ್ಯರಾಗಬೇಕೆಂಬ ಸತ್ಸಂಕಲ್ಪವುಳ್ಳವರಾಗಿ ಜಡೆಮಠದ ಶ್ರೀ ಚರಂತಸ್ವಾಮಿಗಳವರ ಗುರುತ್ವದ ಮೇಲೆಯೂ ಕಾರಿಗಳ ಜಂಗಿನಮಠದ ವೀರಸಂಗಯ್ಯನವರು ಕಾತ್ರ್ಯಾಯಿನಿಮಡಿ ಬೃಹನ್ಮಠದ ಗುರುಬಸಯ್ಯನವರು ಈ ಉಭಯರ ವ್ಯವಿತತ್ವದ ಮೇಲೆಯೂ, ಈ ಪ್ರಭವನಾಮಸಂವತ್ಸರದ ಕಾರ್ತಿಕ ಶುದ್ಧ ೧೦ ಶುಕ್ರವಾರ ಪ್ರತ್ಯಕ್ಷವಾಗಿ ೬ ವಟುಗಳು ಮನೆಯವರು, ೧೪ ವಟುಗಳು ಪರಸ್ಥಳದವರು ಒಟ್ಟು ೧೮ ವಟುಗಳಿಗೆ ಶಿವದೀಕ್ಷಾ ಸಂಸ್ಕಾರವು ಸಾಂಗವಾಗಿ ನೆರವೇರಿಸಲ್ಪಟ್ಟಿತು. ಸದರಿ ಈ ಮಲ್ಲಪ್ಪಯ್ಯನವರು ಚಿಕ್ಕವಯಸ್ಸಿನವರಾಗಿದ್ದರೂ "ಧರ್ಮಕೀರ್ತಿಸ್ಸಯಂ ಸ್ಥಿರಂ" ಎಂಬ ವಾಕ್ಯವನ್ನನುಸರಿಸಿ ಆನಂದದಿಂದ ನೆರವೇರಿಸಿದರು ತರುವಾಯ ಮರುದಿವಸ ಪೂಜಾ ಗಣಾರಾಧನೆಯನ್ನು ಮಾಡಿ, ಭೂರಿದಕ್ಷಿಣೆಯಿಂದ ಮಾಹೇಶ್ವರರನ್ನು ತೃಪ್ತಿಗೊಳಿಸಿದರು. ಗುರುಕಾಣಿಕಾ ಸಂಭಾವನೆ ಯೋಗ್ಯತಾನುಸಾರ ಅರ್ಪಣವಾಯಿತು. ಪಲಾವೀಶ್ವರದಗಳಿಂ ಮಾಡಿ ತಮ್ಮ ಸಂಕಲ್ಪವಂ ಪೂರ್ಣಗೊಳಿಸಿ ಪುಣ್ಯಭಾಗಿಗಳಾದರು. ವೀರಶೈವ ಸಮಾಜೋದ್ಧಾರಕ್ಕಾಗಿ ಉದಯಿಸಿರುವ ಪಂಚಾಚಾರ್ಯಪ್ರಭಾ ಪೋಷಣಕ್ಕಾಗಿ ೨ ರೂಪಾಯಿಗಳನ್ನು ಸಮರ್ಪಿಸಿದರು.

ಕುಪ್ಪನವರ ಬಸಪ್ಪ,
ಕಡ್ಲಬಾಳು.

ಶ್ರೀಮದ್ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ.

ಹೊಳೆ ಲಿಂಗೇಶ್ವರ ಸ್ವಾಮಿಯವರ ರಥೋತ್ಸವವು.

ಸದ್ಯತಸ್ಯಕಾರ ಇದೇ ಪುಷ್ಯ ಬಹುಳ ೬ನೇ ಶನಿವಾರ (ತಾರೀಖು 14-1-1928) ರ ದಿವಸ ಹೊಳೆಲಿಂಗೇಶ್ವರ ಸ್ವಾಮಿಯ ರಥೋತ್ಸವವು ನೆರವೇರಿಸಲ್ಪಡುವುದು. ಅತಿ ಪ್ರಾಚೀನಕಾಲದಿಂದಲೂ ಪುಣ್ಯಕ್ಷೇತ್ರವೆಂದು ಪುರಾಣ ಪ್ರಸಿದ್ಧವಾಗಿರುವ ಈ ಪವಿತ್ರಸ್ಥಾನವು ಶಿವಮೊಗ್ಗಾ ಡಿಸ್ಟ್ರಿಕ್ಟ್ ಸಾಗರ ತಾಲ್ಲೂಕಿಗೆ ಸೇರಿದ ಬಿಳಕಿಯಿಂದ ೨ ಗ್ರಾಮಕ್ಕೆ ಕೇವಲ ಸಮೀಪದಲ್ಲಿರುತ್ತದೆ. ಇದೇ ವರ್ಷ ಹೊಳೆಲಿಂಗೇಶ್ವರಸ್ವಾಮಿಗೆ ಈ ಸೀಮೆ ಭಕ್ತಾದಿಗಳು ಕೊಟ್ಟ ರೂಪಾಯಿಗಳನ್ನು ಕೂಡಿಸಿ ಬಿಳಕಿಯ ಪಾಟೀಲ ಪುಟ್ಟಪ್ಪಗೌಡರು ಎರಡುಪಡೆಯುಳ್ಳ ಒಂದು ಬೆಳ್ಳಿಯ ಕಾಶೀವಿಶ್ವನಾಥನ ಮುಖದಂತೆ ಅನವಟ್ಟಿ ಸೂನಗಾರ ರಾಮಪ್ಪನಲ್ಲಿ ಬಹಳ ಉತ್ಕೃಷ್ಟವಾಗಿ ತಯಾರುಮಾಡಿಸಿರುತ್ತಾರೆ. ರಥೋತ್ಸವಕಾಲಕ್ಕೆ ದೂರದೂರ ಸ್ಥಳಗಳಿಂದ ೧೨ ಸಾವಿರಜನರು ಯಾತ್ರಾರ್ಥಿಗಳಾಗಿ ಬರುವರು. ದನಗಳಜಾತ್ರೆಯು ಕೂಡುವದು. ಹೊಳೆಲಿಂಗೇಶ್ವರ ಸ್ವಾಮಿಯ ಅನುಗ್ರಹದಿಂದ ಭಕ್ತಜನಗಳ ಮನೋಭಿಲಾಷೆಗಳು ಸಿದ್ಧಿಸುತ್ತಿರುವದು ಅನುಭವವೇದ್ಯವಾಗುತ್ತಾ ಇರುವದರಿಂದ ಯಾತ್ರಿಕರಸಂಖ್ಯೆಯು ವರ್ಷವರ್ಷಕ್ಕೆ ಹೆಚ್ಚುತ್ತಾ ಇರುತ್ತದೆ. ಪ್ರೇಕ್ಷಣೀಯಗಳಾದ ನಾಟಕಗಳೂ, ವಿನೋದಕರಗಳಾದ ಆಟಪಾಟಗಳೂ, ಆಶ್ಚರ್ಯಕರಗಳಾದ ಕುಸ್ತಿಗಳೂ ನಡೆಯುವವು. ಪ್ರಸಿದ್ಧ ಕೀರ್ತನಕಾರರಿಂದ ಶಿವಕೀರ್ತನೆಗಳು ನಡೆಸಲ್ಪಡುವವು. ಪರಸ್ಥಳದಿಂದ ಬರತಕ್ಕ ಯಾತ್ರಿಕರವಾಸದುಗ್ಗೆ ವರದಾನದಿಯ ಆಜುಬಾಜು ಪ್ರದೇಶಗಳಲ್ಲಿ ಅನುಕೂಲಪಡಿಸಲ್ಪಟ್ಟಿರುತ್ತದೆ. ಆದ್ದರಿಂದ ದಯಮಾಡಿ ಸರ್ವರೂ ಆಗಮಿಸಿ ಪುಣ್ಯತೀರ್ಥಸ್ನಾನ, ಶಿವಲಿಂಗದರ್ಶನ, ಸತ್ಕಥಾಶ್ರವಣಾದಿಗಳಿಂದ ಕೃತಾರ್ಥರಾಗಬೇಕೆಂದು ಪ್ರಾರ್ಥಿಸುತ್ತೇನೆ.

ಕೆ. ಪಿ. ದೇವಪ್ಪಗೌಡರು ಪಾಟೀಲ,
ಕೋಡಿಹಳ್ಳಿ

ದುಃಖವಾರ್ತೆ.

ಬಿಕ್ಕಾಂಬುಧಿಯಲ್ಲಿ ನೆಲ್ಲಿಲಿಂಕಂಬಣ್ಣನವರ್ಯ್ಯನಂಬಿಯವರು ತಮ್ಮ ಅನುಜರ ಮಕ್ಕಳ ಪೋಷಣೆಯಲ್ಲಿದ್ದು ತಾ|| 21-12-27ನೆ ಬುಧವಾರ ಸಾಯಂಕಾಲ 5 ಘಂಟೆಯಲ್ಲಿ ತಮ್ಮ 75ನೆಯ ವರ್ಷದಲ್ಲಿ ಶಿವೈಕ್ಯರಾದರು. ಇವರು ಹಿರಿಯರು, ಗ್ರಾಮೋದ್ಧಾರಕರು, ದೇವರ ಕಾರ್ಯದಲ್ಲಿ ನಿರತರು ಇವರ ಅಕಾಲಮರಣಕ್ಕೆ ಗ್ರಾಮದಲ್ಲಿ ಸರ್ವರೂ ವಿಷಾದಪಡುತ್ತೇವೆ. ಮೃತರ ಕುಟುಂಬದವರಿಗೆ ಒಗದೀಶನು ದುಃಖಶಮನ ಮಾಡಲೆಂದು ಕೋರುವ

ದುಃಖಭಾಗಿ.

೪೨ನೆಯ ರಾಷ್ಟ್ರೀಯ ಮಹಾಸಭೆಯು ಡಾ|| ಅನ್ಸಾರಿಯವರ ಅಧ್ಯಕ್ಷತೆಯಲ್ಲಿ ಕಳೆದ ತಿಂಗಳು 26 27 28 ರಲ್ಲಿ ಅತಿವೈಭವದಿಂದ ಜರುಗಿತು. ಈ ಕಾಂಗ್ರೆಸ್ಸಿಗೆ ಅಂದಾಜು 20 ಸಾವಿರದವರಿವಿಗೂ ನಾನಾ ಪ್ರಾಂತಗಳಿಂದ ಜನಗಳು ಆಗಮಿಸಿದ್ದರಲ್ಲದೆ ಮಹಾತ್ಮಾ ಗಾಂಧಿ, ಅನಿಬೆಸಂಟು, ಸರೋಜಿನೀದೇವಿನಾಯುಡು ಮುಂತಾದ ಪ್ರಮುಖರೂ ಸಹ ಬಂದಿದ್ದರು. ಅಧ್ಯಕ್ಷರು ಹಿಂದು ಮುಸಲ್ಮಾನರ ಐಕ್ಯವಿಷಯವಾಗಿಯೂ, ಕಾಂಗ್ರೆಸ್ಸಿನ ವಿಷಯದಲ್ಲಿ ಬ್ರಾಹ್ಮಣ ಬ್ರಾಹ್ಮಣೇತರ, ಪಾರ್ಸಿ, ಮುಸಲ್ಮಾನ, ಸೀಖ, ಕ್ರಿಸ್ತಧರ್ಮದವರೆಲ್ಲರೂ ಸಹಾನುಭೂತಿಯಿಂದ ಇರಬೇಕೆಂಬ ವಿಷಯವಾಗಿಯೂ, ನಿರಪರಾಧಿಗಳಾದ ರಾಜಕೀಯ ಕೈದಿಯಾಳುಗಳನ್ನು ಬಿಡಬೇಕೆಂಬ ವಿಷಯವಾಗಿಯೂ, ಸೈಮನ್ ಕಮಿಷನನ್ನು ಬಹಿಷ್ಕರಿಸಬೇಕೆಂಬ ವಿಷಯವಾಗಿಯೂ, ಹಿಂದೂದೇಶದ ಪುರೋಭಿವೃದ್ಧಿ ವಿಷಯವಾಗಿಯೂ, ಆರೋಗ್ಯವಿಷಯವಾಗಿಯೂ ಸರಸವಾದ ಭಾಷಣವನ್ನು ಮಾಡಿದರು.

ಶ್ರೀಃ

ಹತ್ತನೆಯ ಅಖಿಲಭಾರತಮಹಾಸಭಾ ಬೆಂಗಳೂರು.

ಸ್ವಾಗತಸಂಘಾಧ್ಯಕ್ಷರಾದ
ರಾಜಸಭಾಭೂಷಣ ದಿವಾನ್‌ಬಹದ್ದೂರ್
ಸರ್ ಕೆ. ಪಿ. ಪುಟ್ಟಣ್ಣಶೆಟ್ಟಿ, ಕೆ.ಟಿ., ಸಿ.ಐ.ಇ.
ಯವರ ಭಾಷಣ.

ಮಾನನೀಯರಾದ ಮಹಾಶಯರೇ!

ಈ ಸಭಾಮಂಟಪವನ್ನಲಂಕರಿಸಿರುವ ಶ್ರೀ ಮಹಾಸ್ವಾಮಿಗಳಿಗೂ, ಪಂಡಿತಮಂಡಲಿಗೂ, ದೇಶದಾಯಿ ದೇಶಗಳಿಂದ ಬಂದಿರುವ ಸನ್ಮಾನನೀಯರಿಗೂ, ಮಹಾಸಭಾ ಚಿರಸ್ಥಾಯಿ ನಿಧಿಗೆ ದಾತೃಗಳಿಗೂ, ಸದಸ್ಯರಿಗೂ, ಪ್ರತಿನಿಧಿಗಳಿಗೂ ಪ್ರೇಕ್ಷಕರಿಗೂ ಈ ಹತ್ತನೆಯ ಅಖಿಲಭಾರತ ವೀರಶೈವ ಮಹಾಸಭಾ ಸ್ವಾಗತ ಸಂಘದವರ ಪರವಾಗಿ ಅತ್ಯಂತ ವಿನಯದಿಂದ ತಮ್ಮೆಲ್ಲರ ಸುಸ್ವಾಗತವನ್ನು ಬಯಸಲು ಅಪೇಕ್ಷಿಸುತ್ತೇನೆ.

ತಾವೆಲ್ಲರೂ ಸಮಾಜೋನ್ನತಿಯ ಕಡೆಗೆ ಲಕ್ಷ್ಯವಿಟ್ಟು ಪ್ರೇಮದಿಂದ ನಮ್ಮ ಆಮಂತ್ರಣವನ್ನು ಸ್ವೀಕರಿಸಿ ಪ್ರಯಾಣಾಯಾಸವನ್ನು ಗಣನೆಗೆ ತಾರದೆ ತಮ್ಮ ತಮ್ಮ ಉದ್ಯೋಗ ವ್ಯವಹಾರಗಳಿಗಿಂತಲೂ ಸಮಾಜ ಸೇವೆಯೇ ಶ್ರೇಷ್ಠತಮವೆಂದು ಭಾವಿಸಿ ದೂರದ ದೇಶಗಳಿಂದ ಈ ಮಹಾಸಭೆಗೆ ದಯಮಾಡಿಸಿರುವುದು ಅತ್ಯಾನಂದಕರವಾಗಿದೆ.

ಅಖಿಲಭಾರತ ವೀರಶೈವ ಮಹಾಸಭೆಯು 1904 ರಲ್ಲಿ ಧಾರವಾಡದಲ್ಲಿ ಪ್ರಾರಂಭವಾಗಿ 1905 ರಲ್ಲಿ ಬೆಂಗಳೂರು, 1907ರಲ್ಲಿ ಸೊಲ್ಲಾಪುರ, 1908ರಲ್ಲಿ ಬಾಗಲಕೋಟೆ, 1909ರಲ್ಲಿ ಬಳ್ಳಾರಿ, 1911ರಲ್ಲಿ ಬೆಳಗಾಂ, 1913ರಲ್ಲಿ ಸಿದ್ದಾಪುರ, 1917ರಲ್ಲಿ ದಾವಣಗೆರೆ, 1919 ರಲ್ಲಿ ಹುಬ್ಬಳ್ಳಿ—ಈ ರೀತಿ ಬಂದ ಸ್ಥಳಗಳಲ್ಲಿ ನಡೆದು, 7 ವರುಷಗಳಿಂದ ನಿಂತುಹೋಗಿದ್ದು ಈಗ ಮತ್ತೆ ಜಾಗೃತಿಹೊಂದಿ, ಬೆಂಗಳೂರು ನಗರದಲ್ಲಿ ಪುನರುಜ್ಜೀವಿತವಾಗುತ್ತದೆ.

ಮಹನೀಯರೇ! ಬೆಂಗಳೂರು ಪುರನಿವಾಸಿಗಳು ಈ ವಿಷಯದಲ್ಲಿ ಮಾಡಿದ ಪ್ರಯತ್ನಕ್ಕೆ ಇಂಡಿಯಾದೇಶದ ವೀರಶೈವ ಮಂಡಲಿಯವರು ಪ್ರೋತ್ಸಾಹವನ್ನು ಕೊಟ್ಟು ಈ ಮಹಾಸಭೆಯು ನಡೆಯುವ ಹಾಗೆ ಮಾಡಿದುದಕ್ಕಾಗಿ ಅನೇಕ ವಂದನೆಗಳನ್ನು ಸಮರ್ಪಿಸುತ್ತೇನೆ. ಇಂದಿನಿಂದ ಈ ಮಹಾಸಭೆಯು ಇನ್ನು ನಿರಾತಂಕವಾಗಿ ನಡೆದು ನಮ್ಮ ಸಮಾಜಕ್ಕೆ ಸೌಭಾಗ್ಯವನ್ನುಂಟು ಮಾಡಲೆಂದು ಜಗದ್ರಕ್ಷಕನಾದ ಶ್ರೀ ಪರಮೇಶ್ವರನನ್ನು ಪ್ರಾರ್ಥಿಸುತ್ತೇನೆ.

1905ರಲ್ಲಿ ಅಂದರೆ, 22 ವರುಷಗಳ ಹಿಂದೆ ಮಹಾಸಭೆಯು ಈ ನಗರದಲ್ಲಿ ಕೀರ್ತಿಶೇಷರಾದ ಶ್ರೀಮಂತ ಲಿಂಗಣ್ಣ ಜಮಾನ ಸಿರಸಂಗಿ ದೇಸಾಯರವರ ಘನ ಅಧ್ಯಕ್ಷತೆಯಲ್ಲಿ ನಡೆಯಿತು. ಆ ಕಾಲದಲ್ಲಿ ಸ್ವಾಗತ ಸಂಘದ ಅಧ್ಯಕ್ಷತೆಯಲ್ಲಿ ಮಹಾಶಯರಾಗಿದ್ದ ಕೀ|| ರಾವ್‌ಬಹದ್ದೂರ್ ಧರ್ಮಪ್ರವರ್ತ ಗುಬ್ಬಿ ತೋಟದಪ್ಪನವರು, ಮತ್ತು ಕೀ|| ಶಾ|| ಗಳಾದ ದೇಶದ ಮುಖಂಡರಾದ ಬಿಸಪ್ಪನವರು, ಬಿ. ದೊಡ್ಡಗಂಗಪ್ಪನವರು, ಅತ್ತಿಬೆಲೆ ಶಿದ್ದಪ್ಪನವರು, ಗಂಡಿಗೆ ಅಂಗಡಿ ಸಾಸಣ್ಣನವರು, ಗೌಡರ ವೀರಭದ್ರಪ್ಪನವರು—ಈ ದೊಡ್ಡ ಮನುಷ್ಯರ ಹೆಸರನ್ನು ತಮ್ಮೆಲ್ಲರ ಜ್ಞಾಪಕಾರ್ಥವಾಗಿ ಈ ಸಮಯದಲ್ಲಿ ನೆನಪುಮಾಡಲು ಅಪೇಕ್ಷಿಸುತ್ತೇನೆ.

ಮಹಾಸಭಾ ಚಿರಸ್ಥಾಯಿಫಂಡಿನ ದಾತೃಗಳು ಮಹಾಸಭೆಯನ್ನು ಕೂಡಿಸುವ ಕುತೂಹಲದಿಂದ ವಿಶೇಷ ಪ್ರಯತ್ನಪಟ್ಟರಲ್ಲದೆ ಮಹಾಸಭೆಯನ್ನು ಕೂಡಿಸಬೇಕೆಂಬ ಅಭಿಮಾನಶಾಲಿಗಳಿಗೆ ಸಾಕಾದಷ್ಟು ದ್ರವ್ಯಸಹಾಯವನ್ನು ಮಾಡುವದಾಗಿ ವೃತ್ತಪತ್ರಿಕೆಗಳಲ್ಲಿ ಪ್ರಕಟಪಡಿಸಿದರು. ಆದರೂ ಕೆಲವು ಸ್ಥಳಗಳಲ್ಲಿ ಮುಖಂಡರಾದ ಮಹಾಜನರು, ಮಹಾಸಭೆಯನ್ನು ಕೂಡಿಸಲು ಕಾರ್ಯಸನ್ನದ್ಧರಾಗಿ ಮುಂದೆಬಂದರೂ ಆ ಮೇಲೆ ಕೆಲವು ಕಾರಣಾಂತರದಿಂದ ಅದು ನಡೆಯಲು ಆಗಲಿಲ್ಲವಾದ ಪ್ರಯುಕ್ತ, ಬೆಂಗಳೂರು ಪಟ್ಟಣದ ವೀರಶೈವ ಮಹಾಜನರು ಇಲ್ಲಿ ಮಹಾಸಭೆಯನ್ನು ಕೂಡಿಸಲು ಏರ್ಪಡಿಸಿದ ಪ್ರಯತ್ನ ಸಫಲವಾದ್ದು ಮಹತ್ತರ ಸಂಗತಿ. ಇದು ಮೈಸೂರು ದೇಶಕ್ಕೆ ದ್ವಿತೀಯ ರಾಜಧಾನಿಯಾಗಿಯೂ, ಪ್ರಧಾನ ಪಟ್ಟಣವಾಗಿಯೂ, ದೊಡ್ಡ ವ್ಯಾಪಾರಸ್ಥಳವಾಗಿಯೂ, ಆರೋಗ್ಯಕರವಾದ ಹವೆ, ನೀರು, ಬೆಳಕು ಮುಂತಾದ ಸೌಕರ್ಯಗಳಿಂದ ಕೂಡಿರುವದಾಗಿಯೂ, ಶ್ರೀಮನ್ಮಹಾರಾಜರವರ ಮಹಾಕ್ಷಾತ್ರ ಆಶ್ರಯವೂ ಇರುತ್ತದೆ. ನಮ್ಮಗಳ ಸತ್ಕಾರಗಳಲ್ಲಿ ಏನಾದರೂ ಕುಂದುಕೊರತೆಗಳು ಕಂಡುಬಂದಾಗ್ಯೂ, ತಾವು ಅದಕ್ಕೆ ಲಕ್ಷ್ಯಕೊಡದೆ ಸಮಾಜಸೇವೆಯಲ್ಲಿ ನಿರತರಾಗಿರುವ ಸ್ವಾಗತಸಂಘದವರಿಗೆ ತಾವೆಲ್ಲರೂ ನೆರವಾಗಿ ಈ ಮಹಾಸಭಾ ಕಾರ್ಯವು ಸುಲಲಿತವಾಗಿ ನಡೆಯುವಂತೆ ಸಹಾನುಭೂತಿಯನ್ನು ತೋರಿಸುವವರಾಗಬೇಕಾಗಿ ಪ್ರಾರ್ಥಿಸುತ್ತೇನೆ.

ಈ ಕಾಲದಲ್ಲಿ ಯಾವ ಸಮಾಜವೇ ಅಭಿವೃದ್ಧಿಗೆ ಬರಬೇಕಾದರೆ ಸಂಘದ ಸಹಾಯದಿಂದಲೇ ಹೊರತು ಮತ್ತಾವದರಿಂದಲೂ ಸಾಧ್ಯವಾಗುವದಿಲ್ಲ. ತಮ್ಮೆಲ್ಲರ ಕಲಾಕೌಶಲ್ಯ, ಬುದ್ಧಿಚಾತುರ್ಯ, ಸೇವಾಶಕ್ತಿ, ವಿದ್ಯಾಶಕ್ತಿ, ಸಮಾಜದ ಏಳಿಗೆಯಲ್ಲಿರುವ ಪ್ರೇಮ ಇವು ಮುಂತಾದ ಸಾಧನಗಳನ್ನೆಲ್ಲಾ ಈ ಏಕಕಾಲದಲ್ಲಿ ಕೂಡಿಸುವದರಿಂದ ಸುಲಭವಾದ ಕಾರ್ಯವು ಲಭಿಸುವದರಲ್ಲಿ ಸಂದೇಹವಿಲ್ಲ. ಇಂಥ ಸಭೆಗಳನ್ನು ನಡೆಸುವದು, ಉಪನ್ಯಾಸಗಳನ್ನು ಮಾಡುವದು, ಠರಾವುಗಳನ್ನು ಮಂಜೂರು ಮಾಡುವದು ಮಾತ್ರವೇ ನಮ್ಮ ಉದ್ದೇಶವಾಗಬಾರದು. ನಾವು ಇಲ್ಲಿ ಸೇರುವದು ಮಹತ್ಕಾರ್ಯಕ್ಕೆ, ಅದರಿಂದ ಆಗುವ ಫಲವೇನು, ಆ ಉದ್ದೇಶಗಳನ್ನು ಸಾಧಿಸುವ ಬಗೆ ಹೇಗೆ, ನಮ್ಮ ಕರ್ತವ್ಯಗಳೇನು—ಇವೇ ಮೊದಲಾದ ವಿಷಯಗಳು ವಿಚಾರಾರ್ಹಗಳಾಗಿವೆ. ಇದು ಸಮಾಜದ ಪ್ರತಿ ಒಬ್ಬ ವೀರಶೈವನಿಗೂ ಸಂಬಂಧಪಟ್ಟದ್ದಾಗಿರುವದು. ಅನೇಕ ವ್ಯಕ್ತಿಗಳ ಸಮುದಾಯವೇ ಒಂದು ಸಮಾಜ. ಅನೇಕ ಸಮಾಜಗಳ ಸಮೂಹವೇ ಒಂದು ರಾಷ್ಟ್ರ. ಆದುದರಿಂದ ರಾಷ್ಟ್ರಕ್ಕೆ ಮುಖ್ಯ ಅಂಗವಾದ ಪ್ರತಿ ವ್ಯಕ್ತಿಯೂ ತನ್ನ ಕರ್ತವ್ಯವು ಯಾವದೆಂಬುದನ್ನು ತಿಳಿದು ತನ್ನ ಸಮಾಜದ ಮತ್ತು ತನ್ಮೂಲಕ ರಾಷ್ಟ್ರದ ಅಭಿವೃದ್ಧಿಗೆ ಹೇಗೆ ಸಹಾಯಕನಾಗಬೇಕೆಂಬ ವಿಷಯವನ್ನು ಮಹಾಸಭೆಯಲ್ಲಿ ಚರ್ಚೆಯಿಂದ ನಿರ್ಧರಿಸಿ ಆ ಪ್ರಕಾರ ಆಚರಣೆಗೆ ತರತಕ್ಕದ್ದು. ಈ ಮಹಾಸಭೆಯ ಮುಖ್ಯ ಉದ್ದೇಶವಾಗಿರುತ್ತದೆ. ಅದರ ಸಮಾಜದಲ್ಲಿ ಮುಂದಾಳುಗಳೆನಿಸಿಕೊಳ್ಳುವ ಕೆಲವರಿಗೆ ಮಾತ್ರ ಇದು ಸಂಬಂಧಪಟ್ಟದ್ದೆಂದು ತಿಳಿಯಕೂಡದು. ಪ್ರತಿವ್ಯಕ್ತಿಯು ತನ್ನ ವಾಕ್ಶಕ್ತಿಗಳನ್ನು ಕಾಪಾಡುವದಕ್ಕೂ ಪುರೋಭಿವೃದ್ಧಿಯನ್ನುಂಟುಮಾಡುವದಕ್ಕೂ ಸಂಘಶಕ್ತಿಯೇ ಆಧಾರವಾಗಿರುವದರಿಂದ ಪ್ರತಿಯೊಬ್ಬರೂ ಈ ಮಹಾಸಭೆಯಲ್ಲಿ ಆಸಕ್ತರಾಗಿರಬೇಕು.

ನಮ್ಮ ಪೂರ್ವಜರು ನೀತಿ, ಉತ್ಸಾಹ, ಬುದ್ಧಿಶಕ್ತಿ, ಕಾರ್ಯದಕ್ಷತೆ, ಐಕಮತ್ಯ, ಧರ್ಮಾಸಕ್ತಿ, ಸ್ವಾಭಿಮಾನ ಇಂಥಾ ಸದ್ಗುಣಗಳಿಂದ ಕೂಡಿದವರಾದದರಿಂದಲೇ ಭಾರತವರ್ಷದ ಇತಿಹಾಸಗಳಲ್ಲಿ ಮೇರುಪರ್ವತಗಳಂತೆ ಅಗಲಿ ಪ್ರಕಾಶಿಸುತ್ತಿರುವರು. ಈ ದಿವಸಗಳ ಜೊತೆಗೆ ಪೂರ್ವ, ಪಾಶ್ಚಿಮಾತ್ಯ, ಆಧುನಿಕ ದೇಶಗಳಲ್ಲಿ ನಡೆಯುತ್ತಿರುವ ಅದ್ಭುತಕಾರ್ಯಗಳ ಬದಲಾವಣೆಗಳನ್ನು ನೋಡಿಕೊಂಡು ನಮ್ಮ ಸಂಪದಭಿವೃದ್ಧಿ, ವ್ಯಾಪಾರ, ಕಲಾಕೌಶಲ್ಯ, ಬುದ್ಧಿಸ್ವಾತಂತ್ರ್ಯಗಳನ್ನು ವೃದ್ಧಿಮಾಡಿಕೊಂಡು ನಾವೆಲ್ಲರೂ ಉನ್ನತಸ್ಥಿತಿಗೆ ಬರಬೇಕೆಂಬ ದೃಢಸಂಕಲ್ಪವನ್ನು ಮಾಡಬೇಕಾಗಿದೆ. ಈ ಕಾಲದಲ್ಲಿ ಅನೇಕ ಜನಾಂಗದವರು ಸಮಯೋಚಿತವಾದ ಬದಲಾವಣೆಗಳನ್ನು ಮಾಡಿಕೊಂಡು ತಮ್ಮ ತಮ್ಮ ಜನರ ಹಿತಾಭಿವೃದ್ಧಿಗಳನ್ನು ಹೆಚ್ಚಿಸಿಕೊಂಡು ಮುಂದುವರಿಯುತ್ತಿದ್ದಾರೆ. ಇದು ಕೈಕಟ್ಟಿಕೊಂಡು ಸುಮ್ಮನೆ ಕುಳಿತುಕೊಳ್ಳುವ ಕಾಲವಲ್ಲ. ಮುಂದುವರಿಯುವ ಪ್ರಯತ್ನವನ್ನು ಸದಾಕಾಲ ಮಾಡುತ್ತಿರಬೇಕು. ಜಲಸೆಯೇ ಅಭ್ಯುದಯಕ್ಕೆ ಮುಖ್ಯ ಕಾರಣವಾಗಿದೆ. ಹೀಗಿರುವಲ್ಲಿ ನಮ್ಮ ಸಮಾಜದವರು ಮುನ್ನ ನಡೆಯದೆ ಇತರರು ನಮ್ಮ ಸಮಾಜವನ್ನು ಹಿಂದೆ ಮಾಡುವದರಲ್ಲಿ ಯಾವ ಸಂದೇಹವೂ ಇರುವದಿಲ್ಲ. ಆದುದರಿಂದ ನಮ್ಮ ಸಮಾಜದವರು ಚಳವಳಿಯಲ್ಲಿರುವ ಇತರ ಜನಾಂಗದವರ ಮೇಲ್ಪಂಕ್ತಿಯನ್ನನುಸರಿಸಿ ಸಮಾಜದಭ್ಯುದಯ ಕಾರ್ಯಗಳನ್ನು ಅತಿ ತ್ವರೆಯಿಂದ ಮಾಡಲು ಸರ್ವಪ್ರಯತ್ನವನ್ನೂ ಮಾಡಬೇಕೆಂದು ನನ್ನ ವಿನಂತಿ ಇರುತ್ತದೆ.

ಈ ಮಹಾಸಭೆಯಲ್ಲಿ ಬರಬಹುದಾದ ಒಂದೆರಡು ವಿಷಯಗಳನ್ನು ಮಾತ್ರ ತಮ್ಮ ಅವಗಾಹನೆಗೆ ತರಲು ಅಪೇಕ್ಷಿಸುತ್ತೇನೆ.

ಪುಸ್ತಕ ಭಂಡಾರ—ನಮ್ಮ ವೀರಶೈವ ಮತವು ಯುಗ ಯುಗಾಂತರಗಳಿಂದಲೂ ಅನಾದಿಯಾಗಿ ಬಂದಿರುತ್ತದೆ ಎಂಬುವದು ಆಗಮ ಶಾಸ್ತ್ರಾಧಾರಗಳಿಂದಲೂ, ಸಾವಿರಾರು ವರ್ಷಗಳ ಹಿಂದೆಯೇ ರಾಜಾಧಿರಾಜರಿಂದಲೂ ಕೆಲವು ವೀರಶೈವ ಮಠಗಳಿಗೆ ಕೊಡಲ್ಪಟ್ಟಿರುವ ದಾನಶಾಸನಗಳಿಂದಲೂ, ಶಿಲಾಶಾಸನಗಳಿಂದಲೂ, ನಮ್ಮ ಮತದ ಕವಿಗಳು, ಪಂಡಿತರು ರಚಿಸಿರುವ ಗ್ರಂಥಗಳಿಂದಲೂ ಸಮಸ್ತರ ತಿಳುವಳಿಕೆಗೆ ಬಂದಿರುತ್ತದೆ. ಇದು ನಮ್ಮ ಮತದ ಸನಾತನತ್ವವನ್ನು ತೋರಿಸಿಕೊಡುವದಾದಾಗ್ಯೂ, ಅನೇಕ ಹಿಮಾಲಯದವರೆಗೂ ನಮ್ಮ ಮತವು ವ್ಯಾಪಿಸಿಕೊಂಡು ಸುಮಾರು 35-40 ಲಕ್ಷ ವೀರಶೈವರಿಂದ ತುಂಬಿರುವ ಇಂಡಿಯಾದೇಶದಲ್ಲಿ ಯಾವ ಪಟ್ಟಣದಲ್ಲಿಯೂ ನಮ್ಮ ವೀರಶೈವ ಮತ ಗ್ರಂಥಗಳ ಭಂಡಾರವು ಇಲ್ಲದಿರುವದು ಬಹಳ ಶೋಚನೀಯವಾಗಿರುತ್ತದೆ. ವೀರಶೈವರಲ್ಲಿ ಪ್ರಸಿದ್ಧ ಭಾಷ್ಯಕಾರರಾದ ಶ್ರೀಪತಿ ಪಂಡಿತಾಚಾರ್ಯರು ಬ್ರಹ್ಮಸೂತ್ರಗಳ ಮೇಲೆ ರಚಿಸಿರುವ ಶ್ರೀಕರ ಭಾಷ್ಯದಲ್ಲಿ ಷಟ್ಸ್ಥಲ, ಅಷ್ಟಾವರಣ, ಪಂಚಾಚಾರ, ಲಿಂಗಾಂಗ ಸಾಮರಸ್ಯ ಮೊದಲಾದ ವಿಷಯಗಳನ್ನು ಶ್ರುತಿ, ಸ್ಮೃತಿ, ಉಪನಿಷತ್ತುಗಳ ಆಧಾರದಿಂದ ವಿಶದವಾಗಿ ವಿವರಿಸಿರುತ್ತಾರೆ. ಈ ಭಾಷ್ಯವು ಅತಿ ಪ್ರಯಾಸದಿಂದ ಸಂಗ್ರಹಿಸಲ್ಪಟ್ಟು ಈಗ ದೇವನಾಗರೀ ಅಕ್ಷರದಲ್ಲಿ ಅಚ್ಚು ಮಾಡಲ್ಪಡುತ್ತದೆ. ಅದು ಸದ್ಯದಲ್ಲಿಯೇ ಪೂರ್ತಿಯಾಗುವದರಲ್ಲಿದೆ. ದೇವನಾಗರೀ ಅಕ್ಷರದಲ್ಲಿ ಅಚ್ಚುಮಾಡಿಸುವದರಿಂದ ನಮ್ಮ ಹಿಂದೂದೇಶದ ಎಲ್ಲಾ ಭಾಗಗಳಲ್ಲಿಯೂ, ಯೂರೋಪ, ಅಮೇರಿಕಾ ದೇಶಗಳಲ್ಲಿಯೂ ಕೂಡ ಪಂಡಿತರು ನಮ್ಮ ಮತತತ್ವವನ್ನು ಓದಿ ತಿಳಿದುಕೊಳ್ಳುವದಕ್ಕೆ ಅವಕಾಶವುಂಟಾಗುತ್ತದೆ. ಅನಂತರ ಅದನ್ನು ಕನ್ನಡ ಭಾಷೆಯಲ್ಲಿಯೂ, ಇಂಗ್ಲಿಷ ಭಾಷೆಯಲ್ಲಿಯೂ ತರ್ಜುಮೆ ಮಾಡಿಸಬೇಕೆಂಬ ಕುತೂಹಲವಿರುತ್ತದೆ. ಪ್ರಾಚೀನ ಕಾಲದಲ್ಲಿದ್ದ ಇಂಥ ಗ್ರಂಥಗಳೂ ಕವಿಗಳೂ ನಮ್ಮ ಗಮನಕ್ಕೆ ಬಂದಿಲ್ಲದಿರುವದರಿಂದಲೇ ನಮ್ಮ ಮತದ ಉತ್ಕೃಷ್ಟತೆಗೆ ದೃಷ್ಟಾಂತವಾಯಿತು. ದೇಶಕಥಾಮೃತವು ಕಂಡ್ರ ಕಥೆ ಇರುತ್ತದೆ ಎಂದು ನಮೂದಿಸಿದೆ. ಅದನ್ನು ಸಂಗ್ರಹ ಮಾಡುವ ಪ್ರಯತ್ನದಲ್ಲಿರುವನಾಗಿದೆ. ಅನೇಕ ಪ್ರಾಂತ್ಯಗಳ ಮಠಗಳಲ್ಲಿ ಅಮೂಲ್ಯವಾದ ಪ್ರಾಚೀನ ಗ್ರಂಥಗಳು ಇದ್ದ ಸ್ಥಳದಲ್ಲಿಯೇ ನಶಿಸಿಹೋದವು. ಸಂಸ್ಕೃತ, ಕನ್ನಡ, ಆಂಧ್ರ, ತಮಿಳು ಭಾಷೆಗಳಲ್ಲಿಯೂ, ನಮ್ಮ ಮತ ಗ್ರಂಥಗಳು ಅನೇಕವಾಗಿ ಇರುತ್ತವೆ. ಬ್ರಿಟಿಷ ಆಧಿಪತ್ಯದಲ್ಲಿರುವ ದೊಡ್ಡ ಪುಸ್ತಕ ಭಂಡಾರಗಳಲ್ಲಿಯೂ, ಹೈದರಾಬಾದ ಶೀಮೆಯಲ್ಲಿಯೂ ನಮ್ಮ ಮತಗ್ರಂಥಗಳು ದೊರೆಯಬಹುದು. ಅವುಗಳನ್ನು ಶೇಖರಿಸದೆ ಇನ್ನು ಕೆಲವುಕಾಲ ಬಿಟ್ಟರೆ ನಮ್ಮ ಗ್ರಂಥಗಳು ನಿರ್ನಾಮವಾಗುವದರಲ್ಲಿ ಸಂದೇಹವಿಲ್ಲ. ನಮ್ಮ ಪೂರ್ವಿಕರು ಯಾವ ಯಾವ ಮಹತ್ಕಾರ್ಯಗಳನ್ನು ಮಾಡಿರುತ್ತಾರೆ, ಯಾವ ಉದ್ಗ್ರಂಥಗಳನ್ನು ಬರೆದಿರುತ್ತಾರೆ ಎಂಬುದನ್ನು ಕವಿಗಳು ಅಥವಾ ಪಂಡಿತರು ಬರೆದಿರುವ ಗ್ರಂಥಗಳಿಂದ ತಿಳಿಯಬೇಕು. ಈ ಕುಂದುಕೊರತೆಯ ನಿವಾರಣೆ ಬಗ್ಗೆ ಈ ಮಹಾಸಭಾ ಅನುಮತಿಯಿಂದ ಒಂದು ಪ್ರಧಾನ ಪುಸ್ತಕ ಭಂಡಾರವನ್ನು ಸ್ಥಾಪಿಸುವದು ಅತ್ಯಾವಶ್ಯಕವೆಂದು ತೋರುತ್ತದೆ.

ಮಹಾಶಯರೇ! ಈ ಸಭೆಯಲ್ಲಿ ಮಾಡತಕ್ಕ ಮುಖ್ಯವಾದ ಕಾರ್ಯವೇನೆಂದರೆ—ಮಹಾಸಭೆಯ ನಿಯಮ ಘಟನೆ (Constitution)—ಮಹಾಸಭೆಯು ಅವಿಚ್ಛಿನ್ನವಾಗಿ ನಿರಾತಂಕದಿಂದ ನಡೆಯುವ ಉದ್ದೇಶ, ದಾವಣಗೆರೆಯಲ್ಲಿ ನಡೆದ 8ನೆಯ ವೀರಶೈವ ಮಹಾಸಭಾ ಚಿರಸ್ಥಾಯಿ ಫಂಡು ಪ್ರತ್ಯೇಕವಾದ ಸಂಸ್ಥೆಯಾಗಿ ಸ್ವಾಧೀನವಾಗಿ ದಾತೃಗಳ ಆಡಳಿತದಲ್ಲಿರುತ್ತದೆ. ಮಹಾಸಭೆಯು ಪ್ರತಿ ವರ್ಷವೂ ನಡೆಯುವುದಕ್ಕೆ ಚಿರಸ್ಥಾಯಿ ಫಂಡು ಅದರ ವೃದ್ಧ್ಯಂಶ

ಷ್ಟ್ರಿ ಪ್ರಯಾಯ. ಸ್ಥಳದ ವಿದ್ಯಮಾನವನ್ನನುಸರಿಸಿ ಸೂಕ್ತವಾದ ರೀತಿ ಧನಸಹಾಯ ಮಾಡುವದಕ್ಕೆ ಸಿದ್ಧರಾಗಿರುವರು. ಆದರೆ ಈ ಧನಸಹಾಯದಿಂದಲೇ ನಮ್ಮ ಹಾಸವೆ ನೇರವಾಗಿಲ್ಲ. ಇದಕ್ಕಿಂತಲೂ ಅತಿಶಯ ಪ್ರಾಧಾನ್ಯವೆಂದರೆ, ನಮ್ಮ ಸಮಾಜದಲ್ಲಿರುವ ಪರಸ್ಪರ ದ್ವೇಷಾಸೂಯೆಗಳನ್ನು ಬಿಟ್ಟು ಸಮಾಜದ ಸುಧಾರಣೆಗೆ ಬೇಕಾದ ಕೆಲಸಗಳಿಗೆ ಏಕಾಗ್ರಚಿತ್ತರಾಗಿ ವರ್ತಿಸುವದೇ ಮುಖ್ಯವು. ಇದಕ್ಕೆ ನಮ್ಮಲ್ಲಿ ಅತಿ ವಿರಳರಾಗಿರುವ ವಿದ್ಯಾವಂತರು, ಶ್ರೀಮಂತರು ತಮ್ಮ ಶ್ರೇಷ್ಠತ್ವವನ್ನೇ ಪ್ರಧಾನವಾಗಿಟ್ಟುಕೊಳ್ಳದೆ ಅವಿದ್ಯಾವಂತರಾದ ಮತ್ತು ದರಿದ್ರರಾದ ಜನರ ಸಮುದಾಯವನ್ನು ಉನ್ನತಸ್ಥಿತಿಗೆ ತರಬೇಕಾದದ್ದು ಮುಖ್ಯ ಕಾರ್ಯವಾಗಿದೆ. ಸ್ವಾರ್ಥಪರತೆಯನ್ನೂ, ಭಿನ್ನಭಾವವನ್ನೂ ದೂರ ಮಾಡಿ ಅನ್ಯೋನ್ಯ ಭಾವವನ್ನೂ, ಸಹೃದಯತೆಯನ್ನೂ, ದುಃಸ್ಥಿತಿಯಲ್ಲಿರುವ ಜನಗಳ ಮೇಲೆ ಕರುಣವನ್ನೂ, ಪ್ರೇಮವನ್ನೂ ತೋರಿಸಿ ಸಮಾಜದ ಮುಂದಾಳುಗಳು ಏಕಮನಸ್ಸಿನಿಂದ ಕಾರ್ಯಭಾಗವನ್ನು ಮಾಡುವದು ಅತ್ಯವಶ್ಯಕವಾಗಿದೆ. ಈ ಮಹಾಸಭೆಯು ನಿಯಮ ವಿಷಯವನ್ನು ಈ ಸಭಾಧಿವೇಶನದಲ್ಲಿಯೇ ನಿರ್ಧರಿಸಿ ಸೂಕ್ತವಾದ ನಿರ್ಧಾರಗಳನ್ನು ಮಾಡುವದು ಮುಖ್ಯಸಂಗತಿಯಾಗಿದೆ.

ಸಮಾಜದ ಏಕಮತ್ಯ—ಈ ವಿಷಯವಾಗಿ ಹಿಂದಿನ ಮಹಾಸಭೆಗಳಲ್ಲಿ ಕೆಲವು ಪ್ರಮುಖರು ಉಪನ್ಯಾಸ ಮಾಡಿರುವರಾದಾಗ್ಯೂ ನಮ್ಮ ಸಮಾಜದ ಪ್ರಕೃತ ಸಂದರ್ಭದಲ್ಲಿ ಇದೇ ವಿಚಾರವಾಗಿ ಸ್ವಲ್ಪಮಟ್ಟಿಗೆ ಪ್ರಸ್ತಾಪಿಸಬೇಕಾಗಿದೆ. ನಮ್ಮ ಸಮಾಜದಲ್ಲಿರುವ ಕೊರತೆಗಳನ್ನು ಎಷ್ಟು ಹೇಳಿದರೂ ಮುಗಿಯುವ ಹಾಗಿಲ್ಲ. ಮತದಲ್ಲಿ ನೂರಾರು ಪಂಗಡಗಳಿವೆ. ಪಂಗಡಗಳಲ್ಲಿ ನೂರಾರು ಪೋಟಿಗಳಿವೆ. ಜನಸಮುದಾಯದಲ್ಲಿ ಭಿನ್ನಾಭಿಪ್ರಾಯಗಳು ವಿಶೇಷವಾಗಿವೆ. ಐಕ್ಯಕ್ಕೆ ಬೇಕಾದ ವಿರುದ್ಧ ಪದ್ಧತಿಗಳು ಎಲ್ಲೆಲ್ಲಿಯೂ ಕಾಣುತ್ತವೆ. ಇವುಗಳ ಬೆಳವಣಿಗೆಯಾಗಿದ್ದರೆ ಮತದ ಗೌರವಕ್ಕೆ ಲೋಪ ಬರುವ ಸಂಭವವು ನಿದರ್ಶನಕ್ಕೆ ಬಂದಿವೆ. ಸಮಾಜದ ಬಾಲಕ ಬಾಲಿಕೆಯರು ವಿದ್ಯೆಯಲ್ಲಿ ಬಹಳ ಹಿಂದೆ ಉಳಿದಿರುತ್ತಾರೆ. ಜನರು ಸಂಸ್ಕೃತ ವ್ಯಾಖ್ಯಾನವನ್ನು ಮರೆಯುತ್ತಲಿದ್ದಾರೆ. ಕನ್ನಡ ಸಂಸ್ಕೃತ ಭಾಷೆಗಳ ಪಾಂಡಿತ್ಯದಲ್ಲಿ ಆಸಕ್ತಿಯು ಕಡಿಮೆಯಾಗುತ್ತಲಿದೆ. ಪ್ರಸಿದ್ಧ ಕವಿಗಳು, ಪಂಡಿತರು ವಿರಳರಾಗುತ್ತಲಿದ್ದಾರೆ. ಪೂರ್ವಜರು ಅರ್ಜನೆ ಮಾಡಿದ ಪ್ರಸಿದ್ಧಿಯ ಪ್ರಭೆಯು ಕಡಿಮೆಯಾಗುತ್ತಲಿದೆ. ಅನೇಕ ಸ್ಥಳಗಳಲ್ಲಿ ನಮ್ಮ ಸಮಾಜದವರಿಗೆ ಜೀವನವಾಗಿದ್ದ ವ್ಯಾಪಾರವು ಕ್ರಮೇಣ ಕೈಬಿಡುತ್ತಲಿದೆ. ವ್ಯವಸಾಯದಲ್ಲಿಯೂ ನಮ್ಮ ಜನರು ಹಿಂದೆಯೇ ಇರುತ್ತಾರೆ. ವಿದ್ಯಾವಂತರಾಗಿರುವವರಲ್ಲಿ ಅನೇಕರಿಗೆ ಸೂಕ್ತವಾದ ಉದ್ಯೋಗ ದೊರೆಯದೆ ತಾಪತ್ರಯ ಪಡುತ್ತಿದ್ದಾರೆ. ಸಮಾಜದ ತರುಣರಲ್ಲಿ ಮತಾಚಾರಕ್ಕೆ ಆಲಕ್ಷ್ಯ ತೋರುತ್ತಲಿದೆ. ಸಮಾಜದ ಜನಸಂಖ್ಯೆಯಾದರೋ ದಿನೇ ದಿನೇ ಕ್ಷೀಣಗತಿಗೆ ಬರುತ್ತಲಿದೆ. ಸಮಾಜಕ್ಕೆ ಕಲ್ಯಾಣವಾಗಬೇಕಾದರೆ ಈ ಮುಂತಾದ ಕೊರತೆಗಳೆಲ್ಲಾ ನಿವಾರಣೆಯಾಗಬೇಕು. ಇವು ನಿವಾರಣೆಯಾಗಬೇಕಾದರೆ ಸಮಾಜದಲ್ಲಿ ಏಕಮತ್ಯವಿದ್ದೇ ಇರಬೇಕು. ಹಾಗಿಲ್ಲವಾದರೆ ಸಮಾಜದ ಅಭ್ಯುದಯವು ಎಂದಿಗೂ ಖಚಿತವಾಗಿ ದೂರವಾಗಿರುತ್ತದೆ. ಇದು ಸತ್ಯ. ಎಷ್ಟು ಮಹಾಸಭೆಗಳು ಮಾಡಿದರೂ ಏಕಮತ್ಯವಿಲ್ಲದಿದ್ದರೆ ಯಾವ ಕಾರ್ಯವೂ ಸಫಲವಾಗುವದಿಲ್ಲ. ಏಕಮತ್ಯ ಬೇಕಾಗಿಲ್ಲವೆಂದು ಹೇಳುವವರಿದ್ದರೆ ಮಹಾಸಭೆ ಯಾಕೆ ಕೂಡಿಸಬೇಕು? ಸಮಾಜದ ದೃಷ್ಟಿಯು ನಾನಾಂತರ ರೂಪಾಯಿಗಳವರಿಗೆ ಯಾಕೆ ಪ್ರಯಾಸಬೇಕು? ಏಕಮತ್ಯದಕಡೆಗೆ ಸದಾ ದೃಷ್ಟಿಯಿಟ್ಟು ಸಮಾಜ ಬಾಂಧವರೆಲ್ಲಾ ಅನ್ಯೋನ್ಯಭಾವದಲ್ಲಿ ಕೂಡಿ ಕೆಲಸ ಮಾಡಿದರೆ ಆದರೆ ನಮ್ಮ ಸಮಾಜದ ಕೊರತೆಗಳೆಲ್ಲಾ ಬೇಗನೆ ಮಾಯವಾಗುವವು. ಸಮಾಜದವರು ಏಕಮತ್ಯದಿಂದ ಮಾಡಿದ ನಿರ್ಧಾರಗಳಿಗೆ ಇತರರು ಸರಿಯಾದ ಬೆಲೆ ಕೊಡುವರು. ಸಮಾಜದವರ ಕೀರ್ತಿಯು ನಾನಾದೇಶಗಳಲ್ಲೂ ಹರಡುವದು. ಇಂಥಾ ಮಹತ್ತರವಾದ ಕೆಲಸಗಳನ್ನಾದರೂ ಪ್ರಯತ್ನ ಮಾಡುವದಕ್ಕೆ ಸಮಾಜದವರಿಗೆ ಉತ್ಸಾಹ ಉಂಟಾಗುವದು. ಮತ್ತು ಇಂಥಾ ತೊಂದರೆಗಳು ಸಂಭವಿಸಿದಾಗ್ಯೂ ಅವುಗಳನ್ನು ಲೀಲಾಜಾಲವಾಗಿ ಪರಿಹರಿಸುವ ಶಕ್ತಿಯೂ ಸಮಾಜದವರಿಗುಂಟಾಗುವದು. ಇದುದರಿಂದ ಸರ್ವರೂ ದಯಮಾಡಿ ನನ್ನ ಪ್ರಾರ್ಥನೆಯನ್ನು ಚನ್ನಾಗಿ ಆಲಿಸಿ ಸಮಾಜದ ಏಕಮತ್ಯದಕಡೆಗೆ ಯಾವಾಗಲೂ ಮರೆಯದೆ ಲಕ್ಷ್ಯಕೊಟ್ಟು ಕಾರ್ಯಕ್ರಮವನ್ನು ಜರುಗಿಸಬೇಕಾಗಿ ಕೋರುತ್ತೇನೆ.

ಇಲ್ಲಿ ನಡೆಯುವ ಮಹಾಸಭೆಗೆ ಅಧ್ಯಕ್ಷರನ್ನು ಚುನಾಯಿಸುವ ವಿಷಯದಲ್ಲಿ ವರ್ತಮಾನ ಪತ್ರಿಕೆಗಳಲ್ಲಿ ಪ್ರಚುರಪಡಿಸಿ ಪ್ರಕಟಣೆ ಪ್ರಕಾರ ಕೆಲವು ಸ್ಥಳಗಳಿಂದ ಮಾತ್ರ ಅಭಿಪ್ರಾಯಗಳು ಬಂದವು. ಇವುಗಳನ್ನು ಸ್ವಾಗತ ಸಂಘದವರು ಪರ್ಯಾಲೋಚಿಸಿ, ಹುಬ್ಬಳ್ಳಿಯಲ್ಲಿರುವ ರಾವ್ ಬಹದ್ದೂರ್ ಮ|| ರಾ|| ಶ್ರೀಮಂತ ಸಿದ್ದಪ್ಪ ತೋಟಪ್ಪ ಕಂಬಳಿ, ಬಿ. ಎ. ಎಲ್‌ಎಲ್. ಬಿ. ಯವರನ್ನು ಈ ಮಹಾಸಭೆಗೆ ಅಧ್ಯಕ್ಷರನ್ನಾಗಿ ಏಕಾಭಿಪ್ರಾಯದಿಂದ ಆರಿಸಿರುತ್ತಾರೆ. ಈ ಮಹನೀಯರು ಪ್ರಸಿದ್ಧ ವಕೀಲರು, ನಿಗರ್ವಿಗಳು, ಶಾಂತರು, ದೇಶಾಭಿಮಾನಿಗಳು ಆಗಿರುತ್ತಾರೆ. ಇವರು ಬೊಂಬಾಯಿ ಲೆಜಿಸ್ಲೆಟಿವ್ ಕೌನ್ಸಿಲಿನಲ್ಲಿ ಐದು ವರ್ಷಗಳಿಂದಲೂ ಪ್ರಜೆಗಳಿಂದ ಚುನಾಯಿಸಲ್ಪಟ್ಟ ಮೆಂಬರಾಗಿರುತ್ತಾರೆ. ಮತ್ತು ಈಗಿನ ಬೊಂಬಾಯಿ ಕೌನ್ಸಿಲಿನಲ್ಲಿ (Deputy President) ಡೆಪ್ಯುಟಿ ಪ್ರೆಸಿಡೆಂಟ್ ಪದವಿಯನ್ನು ಅಲಂಕರಿಸಿರುತ್ತಾರೆ. ಮತ್ತು ನಮ್ಮ ಸಮಾಜದಲ್ಲಿಯೂ ಇವರು ಹುಬ್ಬಳ್ಳಿ ಮುನಿಸಿಪಾಲಿಟಿಯ (Honorary President) ಅಧ್ಯಕ್ಷರಾಗಿರುತ್ತಾರೆ. ಇವರು ಸರ್ಕಾರಕ್ಕೂ, ಪ್ರಜೆಗಳಿಗೂ ಪ್ರೀತಿಪಾತ್ರರಾಗಿ ನಮ್ಮ ಸಮಾಜದ ಹಿತವನ್ನೇ ಧ್ಯೇಯವಾಗಿಟ್ಟುಕೊಂಡು ಕಾರ್ಯಗಳನ್ನು ಮಾಡುತ್ತಾ ಇರುತ್ತಾರೆ. ತಾವೆಲ್ಲರೂ ಏಕಕಂಠದಿಂದ ಈ ಮಹನೀಯರ ಅಧ್ಯಕ್ಷತೆಯನ್ನು ಅನುಮೋದಿಸಿ ಅನೇಕ ಮಹತ್ವದ ವಿಷಯಗಳನ್ನು ಚರ್ಚಿಸಿ ತೀರ್ಮಾನಿಸುವದಕ್ಕೆ ಆಗಮಿಸಿರುವ ಈ ದಿನವೇ ಶುಭದಿನ ಮತ್ತು ಚಾರಿತ್ರ್ಯಾರ್ಹವಾದ ದಿನವೆಂದು ಭಾವಿಸಿರುವೆನು. ನಡೆಸ ಮಹಾಶಯರಿಗೆ ಮತ್ತೊಮ್ಮೆ ತಮ್ಮ ಸುಖಾಗಮನವನ್ನು ಬಯಸಿ ಈ ಮಹಾಕಾರ್ಯವನ್ನು ನಿರ್ವಿಘ್ನತೆಯಿಂದ ಸಾಂಗಗೊಳಿಸಬೇಕಾಗಿ ಪ್ರಾರ್ಥಿಸಿ ಈ ನನ್ನ ಭಾಷಣವನ್ನು ವಿರಮಿಸುತ್ತೇನೆ.

ಬೆಂಗಳೂರು,
28ನೇ ಡಿಸೆಂಬರ್ 1927.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ನಿರಾಭಾರಿವೀರಶೈವರ ಲಕ್ಷಣ.

ಚೇತನಾಚೇತನಾತ್ಮಕವಾದೀ ಜಗತ್ತಿನಲ್ಲಿ ಗುರುವಿಗಿಂತಲೂ ಶ್ರೇಷ್ಠವಾದ ವಸ್ತುವು ಯಾವದೂ ಇಲ್ಲ. ಗುರುವು ಪರಮಾತ್ಮನ ದ್ವಿತೀಯ ರೂಪಿಯಾಗಿರುವನು. ಭಕ್ತರಿಗೆ ಗುರುವೇ ಸುಂತರವು. ಗುರುವೇ ಅಮರಧೇನು; ಗುರುವೇ ಚಿಂತಾಮಣಿ. ಗುರುವಿನಿಂದಲೇ ಭಕ್ತರುಬಂಧನ ವಿಮೋಚನೆಯಾಗುವದು. ವೇದಾಗಮ ಪ್ರತಿಪಾದಿತವಾದ ವೀರಶೈವಮತವನ್ನು ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರೇ ಸ್ಥಾಪಿಸಿ ಪ್ರತಿಯುಗಂಗಳಲ್ಲಿ ಒಂದೊಂದು ನಾಮವನ್ನು ಧರಿಸಿ ರಂಭಾಪುರಿ, ಉಜ್ಜಯಿನಿ, ಕೇದಾರ, ಶ್ರೀಶೈಲ, ಕಾಶಿ ಕ್ಷೇತ್ರಂಗಳಲ್ಲಿರುವ ಜ್ಯೋತಿರ್ಲಿಂಗಗಳಲ್ಲಿ ಉದ್ಭವಿಸಿ ವಿನತರ್ಕೋಪದೇಶದಿಂದ ನೋಡಲಿ ಮಹಾರಾಜರನ್ನೂ ಸಾರ್ವಭೌಮ ಚಕ್ರವರ್ತಿಗಳನ್ನೂ ಮುಕ್ತರನ್ನಾಗಿ ಮಾಡಿರುವದಲ್ಲದೆ ಅನೇಕಾನೇಕ ಋಷಿಗಳಿಗೆ ಪಟ್ಟ [illegible] ನೋಪದೇಶವನ್ನು ಮಾಡಿ ಮುಕ್ತಿಯೆಂಬ ಸಾಮ್ರಾಜ್ಯಕ್ಕೊಡೆಯರನ್ನಾಗಿ ಮಾಡಿದರು. ಈ ನಮ್ಮ ವೀರಶೈವ ಪ್ರಾಬಲ್ಯವಿರಲಿಲ್ಲ(?) ನಾಲ್ಕು ಆದ್ಯಯುಗಗಳಿರುತ್ತವೆಂದು ಪರ್ಮಶಿರೋಮಣಿಯೆಂಬ ಗ್ರಂಥಗಳಲ್ಲಿಯೂ ಅನೇಕ ವೀರಶೈವ ಪ್ರಾಚೀನ ಗ್ರಂಥಗಳಲ್ಲಿಯೂ ಘಂಟಾಘೋಷವಾಗಿ ಸಾರುತ್ತಿರುವವು. ಇಂಥ ಚತುರಾಶ್ರಮಗಳನ್ನು ಸ್ಥಾಪಿಸಿದ ಶ್ರೀ ಜಗದ್ಗುರು ಪಂಚಾಚಾರ್ಯರೇ ಜಗದ್ಗುರುಗಳೆಂದು ಬೋಧಿಸುತ್ತಿರುವ ಸುಪ್ರಭೋಧಾಗಮವನ್ನು ಕಣ್ತೆರೆದು ನೋಡದೆ ನಾವೇ ಶ್ರೇಷ್ಠರೆಂದೆನ್ನುವವರಿಗೇನನ್ನಬೇಕು? ಶ್ರೀ ಜಗದ್ಗುರು ಪಂಚಾಚಾರ್ಯರ ಪಂಚಕಳಶಗಳಂತೆ ಈ ಸನ್ಯಾಸಾಶ್ರಮದವರು ಅಶಾಸ್ತ್ರೀಯವಾಗಿ ಪಂಚಕಳಶಗಳನ್ನು ಕಲ್ಪಿಸಿಕೊಂಡಿರುತ್ತಾರೆ. ಯಾವ ಆಗಮದಲ್ಲಿ ಹೇಳಿರುತ್ತದೆ? ಹಿಂದೆ ವಿರಕ್ತರಲ್ಲಿ ಮಹಾತಪಸ್ವಿಗಳಾದ ಮರತೋಂಟದಾರ್ಯರು ಅನೇಕ ಮುಡಿಗೇಸ್ವಾಮಿಗಳು ಕೂಡ ಶ್ರೀ ಜಗದ್ಗುರು ಪಂಚಾಚಾರ್ಯರ ಸ್ತೋತ್ರವನ್ನು ಅನೇಕ ರೀತಿಯಾಗಿ ಮಾಡಿರುತ್ತಾರೆ. ಇವರು ಮಹಾಮಹಿಮರಾಗಿದ್ದರಲ್ಲದೆ ದುರಿತ ಮಾರ್ಗಗಳೆಂದೆನಿಸಿದ ಪಂಚಕ್ಲೇಶಗಳನ್ನೇ ಪಂಚಕಳಶಗಳನ್ನು ಮಾಡಿ ಶ್ರೀ ಜಗದ್ಗುರುಗಳವರ ಶಿವಪೂಜಾಸಮಾಧಿಸ್ಥಾನಕ್ಕೆ ಮಂಟಪದ ಪಂಚಕಳಶಗಳನ್ನಾಗಿ ಇರಿಸಿರುವರು. ಈಗಿನ ವಿರಕ್ತರು ೧ ಮದರೂಪವೆಂತಲೂ ೨ ಬೇರಾಸಮವೆಂತಲೂ ೩ ಕುಮಾರ ೪ ಕಂಪು ೫ ಸಂಪಾದನೆ ಮಠಗಳೆಂತಲೂ ಕಲ್ಪನಾಮಾತ್ರವಾಗಿ ಬೇಗನಂಥ ಪಂಚಕಳಶಗಳನ್ನು ನಿರ್ಮಿಸಿಕೊಂಡಿರುತ್ತಾರೆ.

ಈಗ ಪೂರುವರ್ಷದೊಳಗಿದ್ದ ಮುಳಗುಂದ ಮಹಾಂತಸ್ವಾಮಿಗಳು ಮಹಾಮಹಿಮರೆನಿಸಿಕೊಂಡರು. ಆದರೆ ಇವರು ತಮ್ಮ ಪದ್ಧತಿಯಲ್ಲಿ ನಾಸು ಯಾವ ಸಮೇದವನೂ ಇಲ್ಲ. ಶಿವಸವೇದನನಿರುತ್ತೇನೆಂದು ಹೇಳಿದ್ದರ ಮೇಲಿಂದ ಧನಾರ್ಜನ ಮಾಡುವದರಲ್ಲಿ ಪ್ರವೀಣತೆಯನ್ನು ಪಡೆದಿರುವಂಥ ಈ ಐದುಮಠಗಳು ಬೇಕಾಗಿದ್ದಿಲ್ಲವೆಂಬುದು ಸ್ಪಷ್ಟವಾಗುವದಿಲ್ಲವೇ? ದುಡ್ಡು ದುಡ್ಡು ಎಂದು ಬಳಲುತ್ತಿರುವಂಥ ಈ ಪಂಚಮಠಗಳು ನಿಜವಾದ ನಿರಾಭಾರಿ ವೀರಶೈವರ ಲಕ್ಷಣವನ್ನು ತೋರಿಸುವದಿಲ್ಲ.

ನಿರಾಭಾರಿ ವೀರಶೈವನ ಲಕ್ಷಣವು ಹ್ಯಾಗೆಂದರೆ ವಿದ್ಯೆಯೇ ಸತಿ, ಸಂತೋಷವೇ ಸುತ, ವಿರಾಗವೇ ಬಂಧು, ಕ್ಷಮೆಯೇ ಸಹಚಾರಕನು, ಶಾಂತಿಯೇ ಸಖನು, ಭಕ್ತಿಯೇ ಮಾತೆಯು, ಆಚಾರವೇ ತಂದೆಯು, ಸತ್ಯವೇ ಮಿತ್ರ, ಶ್ರದ್ಧೆಯೇ ಸೊಸೆ, ಮೈತ್ರ್ಯಾದಿ ಸದ್ಗುಣಗಳೇ ಪೌತ್ರರು, ಜ್ಞಾನವೇ ದೇಹ, ವಿಚಾರವೇ ಕ್ಷೇತ್ರ, ಅಹಿಂಸೆಯೇ ದಾಸಿ, ಅನ್ವೇಷಣೆಯೇ ವಾಸನು, ಧರ್ಮವೇ ವಾಹನ, ದಮೆಯೇ ಆಚಾರ್ಯನು, ಮುಕ್ತಿಯೇ ದೇಶವೆಂಬ ಪರಮಾರ್ಥವಾದ ಕುಟುಂಬವುಳ್ಳವನಾಗಿ ಕಂಥೆ, ದಂಡ, ಕಮಂಡಲು, ಭಿಕ್ಷಾಪಾತ್ರೆ, ಭಸ್ಮ, ಘುಟಿಕೆ ಎಂಬ ಬಾಹ್ಯದ ಪಂಚಮುದ್ರೆಗಳನ್ನು ಅಯಾ ಮಂತ್ರಪೂರ್ವಕವಾಗಿ ಧರಿಸಿ ಅಂತರಂಗದಲ್ಲಿ ಸಮತೆಯೇ ಕಂಥೆ, ಜ್ಞಾನವೇ ದಂಡ, ದಮೆಯೇ ಕಮಂಡಲು, ವೈರಾಗ್ಯವೇ ಭಿಕ್ಷಾಪಾತ್ರೆ, ಕ್ಷಮೆಯೇ ಭಸ್ಮಘುಟಿಕೆಯುಳ್ಳಾತನಾಗಿ, ತುರುಬು, ಜಡೆ, ಬೋಳು, ಅಜಿನ, ವಲ್ಕಲ, ದಿಗಂಬರಾದಿ ಸ್ವೇಚ್ಛಾವಿಚಿತ್ರ ಶಿವವೇಷವನ್ನು ಸ್ವೀಕರಿಸಿ ನಿಯತವಾದ ಭಿಕ್ಷಾಹಾರವನ್ನು ತೆಗೆದುಕೊಂಡು ಭಸ್ಮೋದ್ಧೂಳನ, ತ್ರಿಪುಂಡ್ರಧಾರಣ, ಶಿವಲಿಂಗಾರ್ಚನ, ಶಿವಮಂತ್ರಜಪ, ಶಿವಪ್ಲವಳ ಕವಿತಾರ, ಲಿಂಗಾಂಗಸಂಯೋಗಾದಿ ಜ್ಞಾನಕ್ರಿಯಾಸಂಪನ್ನರಾಗಿ ಪರರಸಾಯನ, ವಾದವಶ್ಯ, ಜ್ಯೋತಿಷ, ಕ್ರಯವಿಕ್ರಯಾದಿ ಲೌಕಿಕ ವ್ಯವಹಾರಗಳನ್ನು ತೊರೆದು, ವನಿತಾದಿ ವಿಷಯವಿರಕ್ತನಾಗಿ, ಅಮೇಲೆ ಭವಾರಣ್ಯಮಧ್ಯದ ಲೋಭವೆಂಬ ಕೆಸರನ್ನು ತುಳಿಯದೆ ಇಂದ್ರಿಯಗಳೆಂಬ ಪಿಶುಗಳನ್ನು ಲೆಕ್ಕಿಸದೆ, ಮೋಹವೆಂಬ ಪಿಶಾಚಿಯ ಭಯಕ್ಕೊಳಗದೆ, ಕ್ರೋಧವೆಂಬ ವ್ಯಾಘ್ರನಿಗೆ ಸಿಗದೆ, ಮಮಕಾರವೆಂಬ ಸರ್ಪದ ಭೀತಿಯಿಲ್ಲದೆ, ಕಾಮವೆಂಬ ಚೋರನಿಗೊಳಗಾಗದೆ, ಮದವೆಂಬ ಕತ್ತಲೆಗೆ ಸಿಕ್ಕದೆ, ತಾಪತ್ರಯವೆಂಬ ಕುಳಿಯಲ್ಲಿ ಬೀಳದೆ, ವಿಷಯಗಳೆಂಬ ಕಂಟಕಗಳನ್ನು ಮೆಟ್ಟದೆ, ಆಸೆಯೆಂಬ ಜಿಗಲೆಗಳೊಳು ಸಿಲುಕದೆ, ಅಹಂಕಾರವೆಂಬ ಮಹಾನದಿಯೊಳು ಬೀಳದೆ, ಸರ್ವಾವಧಾನಿಯಾಗಿ ಗುರುಲಿಂಗಜಂಗಮನಿಷ್ಠೆಯ ಅಂಗಗೊಂಡು ಶಿವಜ್ಞಾನಾರಾಧನಾಗಿ ಸಂಚರಿಸುವಾತನೆ ನಿರಾಭಾರಿ ವೀರಶೈವನೆನಿಸುವನು. ಆದ್ದರಿಂದ ನಿರಾಭಾರಿ ವೀರಶೈವರೆನಿಸಿಕೊಳ್ಳುವವರು ಶಾಸ್ತ್ರೀಯವಾದ ಲಕ್ಷಣಗಳನ್ನು ತಿಳಿದು ಆದರಂತೆ ಆಚರಿಸುತ್ತ ದುರಭಿಮಾನವನ್ನು ತ್ಯಜಿಸಿ ಶ್ರೀ ಜಗದ್ಗುರು ಪಂಚಾಚಾರ್ಯರ ಕೃಪಾಕಟಾಕ್ಷಕ್ಕೆ ಪಾತ್ರರಾಗಿ ಮೋಕ್ಷಪದವಿಯನ್ನು ಪಡೆಯಬೇಕೆಂದು ನನ್ನ ಕೋರಿಕೆ ಇರುತ್ತದೆ.

ಬಸನಗೌಡಾ ಪಾಟೀಲ, ಜಾಲಿಹಾಳ.

ಪಂಚಾಚಾರ್ಯ ಪ್ರಭಾ

೧೯೩೪ನೇ ಜನವರಿ ತಾ|| ೮ನೇ ಸೋಮವಾರ

ಗುರು

ಶ್ರೀ ಸದ್ಯೋಜಾತಾದಿ ಮುಖಗಳಿಂ ಪುಟ್ಟಿದ ಐದುಜನ ಆಚಾರ್ಯರಲ್ಲಿ ಮೊದಲನೆಯವರಾದ ಜಗದ್ಗುರು ಶ್ರೀ ರೇಣುಕಾಚಾರ್ಯರು ಭಾಷ್ಯಾದಿಗ್ರಂಥಗಳ ರಚನಾಪೂರ್ವಕವಾಗಿ ವೀರಶೈವಸಿದ್ಧಾಂತವನ್ನು ಸ್ಥಾಪಿಸಿ, ಜಗತ್ತನ್ನು ಪವಿತ್ರಗೊಳಿಸುವುದಕ್ಕಾಗಿ ಅಲ್ಲಲ್ಲಿಯೇ ಸಂಚರಿಸುತ್ತ ಬಂದಾಗೊಂದು ದಿವಸ ಮದಾಂಧನೂ, ಪ್ರಜಾಕಂಟಕನೂ, ವ್ಯಸನಗುರುದ್ರೋಹಿಯೂ, ನಿಗಮಾಗಮಗಳಲ್ಲಿ ಭಕ್ತಿಶೂನ್ಯನೂ, ತನಗೆ ಸಮಾನರಿಲ್ಲವೆಂಬ ಅಹಂಕಾರಶಿಖರವನ್ನು ಏರಿದವನೂ, ಪ್ರಜಾಯೋಗಕ್ಷೇಮರಹಿತನೂ, ಧರ್ಮಗಂಧವನ್ನರಿಯದವನೂ, ಪಾಪಾತ್ಮನೂ, ದಯಾರಹಿತನೂ, ನಿರ್ಘೃಣನೆಯೂ ಆದ ಮಂಗಳವಾಡ ನಗರಾಧಿಪತಿಯಾದ ವೀರಬಿಜ್ಜಳಭೂಪಾಲನ ಗರ್ವವನ್ನು ನಾಶಪಡಿಸಿ ಪ್ರಜಾಕಲ್ಯಾಣವನ್ನು ಮಾಡಬೇಕೆಂಬ ಉದ್ದೇಶದಿಂದ ಮಂಗಳವಾಡ ನಗರವನ್ನು ಪ್ರವೇಶಮಾಡಿ ಮಧ್ಯಾಹ್ನಸಮಯಕ್ಕೆ ವೀರಬಿಜ್ಜಳನ ಅರಮನೆಯನ್ನು ಪೊಕ್ಕು "ಭವತಿ ಭಿಕ್ಷಾಂದೇಹಿ" ಎಂದು ಭಿಕ್ಷೆಯನ್ನು ಕೇಳಿದನು. ಈ ಧ್ವನಿಯನ್ನು ಕೇಳಿದ ಮಾತ್ರದಿಂದ ಸಜ್ಜೆಯೊಳಗಿರುವ ವೀರಬಿಜ್ಜಳನು ಕೋಪೋದ್ರೇಕದಿಂದ ಕೂಡಿದವನಾಗಿ ಎಲೈ ಪರಿಚಾರಕರಿರಾ ಹೊರಗೆ ಅದಾವನೋ ಭಿಕ್ಷಾರ್ಥಿಯಾಗಿ ಕೈನೀಡುವನು. ಕುದಿಯುತ್ತಿರುವ ಪಾಯಸವನ್ನೇ ಆತನ ಕೈಗೆ ಹಾಕಿರಿ, ಏನುಮಾಡುವನೋ ನೋಡೋಣ ಎಂದು ಪರಿಚಾರಕರಿಗೆ ಅಜ್ಞೆಯನ್ನಿತ್ತನು. ರಾಜಾಜ್ಞೆಯನ್ನು ಮೀರದೆ ಪರಿಚಾರಕನು ಒಲೆಯಮೇಲೆ ಕುದಿಯುತ್ತಿರುವ ಬಿಸಿಬಿಸಿಯಾದ ಪಾಯಸವನ್ನು ಹಾಗೆಯೇ ಸಟ್ಟುಗದಿಂದ ರೇಣುಕನ ಬೊಗಸೆಗೆ ನೀಡಿದನು. ಶಾಂತಿಘನನೂ, ಮಹಾತಪಸ್ವಿಯೂ, ಮಹಾತ್ಮನೂ ಆದ ಆ ರೇಣುಕನು

"ಭಿಕ್ಷಾಂತರಾಂ ಪರಿಗೃಹ್ಯ ರೇಣುಕಾಗುರು
ಪಾತ್ರಾನ್ನ ಸಕಾರ್ತಸ್ಯ ... ...
... ...
... ...
ದಂಡಪ್ರವಾಸೇ ... ...
ತೀಃ ಪ್ರಘುತರಸ್ತ್ರಾ ... ..."

ಶ್ರೀ ಜಗದ್ಗುರು ರೇಣುಕಾಚಾರ್ಯನು ಅತ್ಯಂತ ... ಕುದಿವ ಪಾಯಸವನ್ನು ... ... ಅಂಗೈಯಲ್ಲಿ ... ... ಗೀತೆಗೆ ... ಅನೇಕ ... ... ಗಾಯನವನ್ನಾಗಿ ... ... ಕ್ಷಣಮಾತ್ರದಲ್ಲಿಯೇ ... ... ಆಯಿತು. ಈ ಅದ್ಭುತವಾದ ಕಾರ್ಯವನ್ನು ... ರಾಜನು ನೋಡಿ ಗರ್ವಗುಂದಿ ... ... ದವನಾಗಿ ಪ್ರಾರ್ಥಿಸುವುದಕ್ಕೆ ಪ್ರಾರಂಭಿಸಿದನು.

... ...
ಮಹಾತ್ಮಾ... ... ...
... ...
... ...

ಗುರುಸಾರ್ವಭೌಮನೆ! ನಾನು ... ... ವನ್ನು ತಿಳಿಯದೆ ... ... ರವಾದ ಪಾಪಿಗಳು ಲೋಕದಲ್ಲಿ ... ... ಕಾರ್ಯವನ್ನು ಮಾಡಿದರೂ ಇಂತಹ ... ... ಮಾಡುವನೆ? ಎಲೈ ಮಹಾತ್ಮನೆ ... ... ಮಾಡಿದ ಈ ಮಹಾಪರಾಧವನ್ನು ಕ್ಷಮಿಸು. ... ಇವಗೂ ಅಜ್ಞಾನದಿಂದಲೂ ರಾಜ್ಯಮದದಿಂದಲೂ ರಾಜಧರ್ಮಗಳಿಗೆ ವಿರೋಧವಾಗಿ ಅನೇಕ ದುಷ್ಕಾರ್ಯಗಳನ್ನು ಮಾಡಿದೆನು. ಇಷ್ಟೇ ... ... ಒಬ್ಬರಿಗೂ ಒಂದುಕಾಸನ್ನೂ ಧರ್ಮಮಾಡಿದವನಲ್ಲ. ನಿನ್ನ ಅಸಾಧಾರಣವಾದ ಮಹಿಮೆಯನ್ನು ನೋಡಿ ನನ್ನ ಅಹಂಕಾರವೆಲ್ಲ ನಷ್ಟವಾಯಿತು. ಇನ್ನು ಮುಂದೆ ಶಿಷ್ಟಮಾರ್ಗವನ್ನು ಹಿಡಿಯುವೆನು. ನಿನ್ನ ದರ್ಶನರೂಪವಾದ ಸೂರ್ಯನಿಂದ ನನ್ನ ಅಜ್ಞಾನಾಂಧಕಾರವು ನಷ್ಟವಾಯಿತು. ನನ್ನ ಅಪರಾಧಗಳನ್ನು ಕ್ಷಮಿಸು. ಭಕ್ತಿಪೂರ್ವಕವಾಗಿ ಭಿಕ್ಷೆಯನ್ನು ನೀಡುತ್ತೇನೆ. ದಯೆಯಿಂದ ಪರಿಗ್ರಹಿಸಿ ಉದ್ಧರಿಸು ಎಂದು ವೀರಬಿಜ್ಜಳನು ಸಾಷ್ಟಾಂಗವಾಗಿ ಶ್ರೀ ರೇಣುಕನ ಅಡಿದಾವರೆಗಳಿಗೆರಗಿ ಬೇಡಿಕೊಂಡನು. ದಯಾಸಾಗರನಾದ ಶ್ರೀ ರೇಣುಕ ಭಗವತ್ಪಾದರು ಎಲೈ ವೀರಬಿಜ್ಜಳನೇ! ಭಿಕ್ಷೆಯನ್ನು ಕೊಡುವ ಸಾಮರ್ಥ್ಯವು ನಿನಗಿದ್ದರೆ ಈ ಪ್ರಮಥಗಣಕ್ಕೆ ಭಿಕ್ಷೆಯನ್ನು ಕೊಟ್ಟು ಸಂತೈಸೆಂದು ಕಣ್ಣುಮುಚ್ಚುವದರೊಳಗಾಗಿ ಅಸಂಖ್ಯಾತ ಪ್ರಮಥರನ್ನು ಸೃಷ್ಟಿಸಿದನು. ಮಹಾರಾಜನು ಅಸಂಖ್ಯಾತವಾಗಿ ನಿಂತಿರುವ ಪ್ರಮಥ ಸಮೂಹವನ್ನು ನೋಡಿ ಭಯಭ್ರಾಂತನಾಗಿ ಗುರುಪುಂಗವನೆ! ನೀನು ಸೃಷ್ಟಿಸಿದ ಗಣಪುಂಗವರನ್ನು ತೃಪ್ತಿಪಡಿಸಲು ನನ್ನಿಂದ ಶಕ್ಯವಿಲ್ಲವು. ನನ್ನ ಸಂಪತ್ತೆಲ್ಲ ಉಪಯೋಗಿಸಿದರೂ ಈ ಪ್ರಮಥರಿಗೆ ತೃಪ್ತಿಯಾಗಲಾರದು. ಕ್ಷಮಿಸು ಎಂದು ಪುನಃ ಸಾಷ್ಟಾಂಗದ ನಮನಗಳನ್ನು ಮಾಡಿ ಬೇಡಿಕೊಳ್ಳಲು, ಎಲೈ ಬಿಜ್ಜಳನೇ ಇಂತಹ ಅಹಂಕಾರದಿಂದ ಅನೇಕರು ನಷ್ಟಹೊಂದಿರುವರು. ನಿನ್ನ ರಾಜ್ಯಕೋಶಗಳೆಲ್ಲವೂ ಸ್ಥಿರವಲ್ಲವು. ಪರಮಾತ್ಮನ ಧ್ಯಾನದಿಂದ ಪುನೀತರಾಗಿ ಮನೆಗೆ ಬಂದ ಅತಿಥಿ ಅಭ್ಯಾಗತರಿಗೆ ಯಥಾಶಕ್ತಿ ದಾನಧರ್ಮಗಳನ್ನು ಮಾಡುತ್ತ ಪುಣ್ಯಭಾಗಿಗಳಾಗುವುದೇ ಮಾನವಜನ್ಮದ ಮುಖ್ಯಫಲವಲ್ಲವೆ? ಇರಲಿ, ಒಂದು ಸೇರು ಅಕ್ಕಿಯನ್ನೂ ಒಂದು ಸೇರು ತುಪ್ಪವನ್ನೂ ಕೊಟ್ಟರೆ ಇಷ್ಟರಿಂದಲೇ ಈ ಪ್ರಮಥರನ್ನೆಲ್ಲ ತೃಪ್ತಿಗೊಳಿಸುವೆನು. ಎಂದು ಹೇಳಿ ವೀರಬಿಜ್ಜಳನಿಂದ ಅಲ್ಪವಾದ ಅಕ್ಕಿ ಮತ್ತು ತುಪ್ಪವನ್ನು ತೆಗೆದುಕೊಂಡನು.

"ತದನ್ನಂ ತತ್ತು ತಗ್ರಹ್ಯ ಸರ್ವೇಷಾಂ ಪತೇ
ದಪ್ಯ ... ...
... ...
ಭಾವಃ"

ಜಗದ್ಗುರುಗಳು ಕ್ಷಣಮಾತ್ರದಲ್ಲಿಯೇ ಅಪ್ರಾಕೃತರಗಳಾದ ಅನಂತಸ್ಥರಗಳಾದ ... ... ಗಳನ್ನು ... ... ದ ಪ್ರಮಥಗಣವನ್ನು ತೃಪ್ತಿಗೊಳಿಸಿದರು. ಈ ಮಹಿಮಾತಿಶಯವನ್ನು ವೀರಬಿಜ್ಜಳನು ನೋಡಿ ಪರವಶನಾಗಿ ಗುರುಗಳ ಅಡಿದಾವರೆಗೆ ಶರಣಾಗತನಾಗಿ ಗುರುಕೃಪೆಗೆ ಪಾತ್ರನಾಗಿ ಗುರುಗಳಿಂದ ... ... ಧರ್ಮಪಥನೂ, ... ಕೀರ್ತಿಪಡೆದು ... ... ಪಾತ್ರನಾದನೆಂದು ಶ್ರೀ ರೇಣುಕವಿಜಯವೆಂಬ ಸ್ವಾ... ... ಗ್ರಂಥದಿಂದ ಗೊತ್ತಾಗುತ್ತದೆ. ಇಂಥ ಪಂಚಾಚಾರ್ಯ ಭಗವತ್ಪಾದರ ಚರಿತ್ರೆಗಳು ಇದಕ್ಕೆ ... ... ಗಳಾಗಿರುವವು. ಕೆಲವು ಕಾಲದಿಂದೀಚೆಗೆ ಸಂಸ್ಕೃತ ಪ್ರಾಚೀನ ಗ್ರಂಥಗಳು ಮೂಲೆಗುಂಪಾಗಿ ... ... ಕ್ಕೆ ... ... ದ ... ... ಅಸಾಧ್ಯವಾದ ಪ್ರಭಾವವನ್ನು ... ... ಆಚಾರ್ಯರಲ್ಲಿ ಭಕ್ತಿಶೂನ್ಯರಾಗಿ ... ... ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರಿಗೆ

ನಮೋಽಸ್ತು ... ...
... ...
... ... ||

ನಮಸ್ಕಾರ ಮಾಡಿಯೆಂದು ಹೇಳಿಕೊಳ್ಳುವುದೂ ... ಶಕ್ತಿಗಳಿಗೆ ಸಮಾನರೆಂದು ... ... ಎಲ್ಲ ... ... ದಿರುವುದರಿಂದ ಇನ್ನು ಇವರಿಗಿಂತಲೂ ಮೇಲೆಂಬುವರ ವಿಷಯದಲ್ಲಿ ಹೇಳುವದೇನು? ಆದುದರಿಂದ ವೀರಶೈವ ಮಹಾಜನಗಳೆಲ್ಲರೂ ಮೂಲಗುರುಗಳಾದ ಶ್ರೀ ಜಗದ್ಗುರು ಪಂಚಾಚಾರ್ಯರನ್ನು ಅನವರತವೂ ಸ್ಮರಿಸುತ್ತ ಪುನೀತರಾಗಬೇಕೆಂದು ಕೋರುತ್ತೇವೆ.

ಅಖಿಲಭಾರತ ವೀರಶೈವ ಮಹಾಸಭಾ.

ಈ ಸಭೆಯು ಬೆಂಗಳೂರಲ್ಲಿ ಕಳೆದತಿಂಗಳು 28-29-30 ರಲ್ಲಿ ಬಹು ಅತ್ಯುತ್ಸಾಹದಿಂದ ನಡೆಯಿತು. ಅನೇಕ ಪ್ರಾಂತಗಳಿಂದ ವೀರಶೈವಪ್ರಮುಖರು ಆಗಮಿಸಿದ್ದರು. 28ನೇ ತಾರೀಖು ಬುಧವಾರ ಪ್ರಾತಃಕಾಲಕ್ಕೆ ರಾವ್ ಬಹದ್ದೂರ್ ಮ|| ರಾ|| ಕಂಬಳಿಯವರು ರೈಲಿನಿಂದ ಇಳಿದರು. ಸ್ವಾಗತಸಂಘಾಧ್ಯಕ್ಷರಾದ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರು ಮುಂತಾದ ಪುರಪ್ರಮುಖರು ಎದುರ್ಗೊಂಡು ಕುಶಲಪ್ರಶ್ನೆಗಳನ್ನು ನಡೆಯಿಸಿ, ಅತಿ ಸಂಭ್ರಮದಿಂದ ಕರೆದುಕೊಂಡುಹೋಗಿ ನಿಯಮಿತಸ್ಥಳವನ್ನು ಸೇರಿಸಿದರು. ಮಧ್ಯಾಹ್ನ ಮೂರುಘಂಟೆಗೆ ಲಾಲ್‌ಬಾಗಿನಲ್ಲಿ ಸಭೆಯು ಪ್ರಾರಂಭವಾಯಿತು. ಸಚಿವೋತ್ತಮರು ಮುಂತಾದ ಸರ್ಕಾರಿ ಪ್ರಮುಖೋದ್ಯೋಗಿಗಳು ಸಹ ಸಭೆಗೆ ಆಹೂತರಾಗಿದ್ದರು. ಸ್ವಾಗತಸಂಘಾಧ್ಯಕ್ಷರು ಅತಿ ಮನೋಹರವಾದ ಭಾಷಣವನ್ನು ಮಾಡಿದನಂತರ ಈ ಮಹಾಸಭೆಯು ಅಭ್ಯುದಯವನ್ನು ಬಯಸಿ ಶ್ರೀಮನ್ಮಹಾರಾಜರು ಮುಂಬೈಯಿಂದ ಕಳುಹಿಸಿದ ತಂತಿಯ ವರ್ತಮಾನವನ್ನು ಸರ್ ಪುಟ್ಟಣ್ಣಶೆಟ್ಟರು ಓದಿದರು. ಬಳಿಕ ಜಸ್ಟಿಸ್ ಮ|| ರಾ|| ಪಿ. ಮಹಾದೇವಪ್ಪನವರು ಸೂಚಿಸಿದ ಪ್ರಕಾರ ರಾವ್‌ಬಹದ್ದೂರ್ ಮ|| ರಾ|| ಕಂಬಳಿಯವರು ಸರ್ವಾನುಮತದಿಂದ ಅಧ್ಯಕ್ಷಪದಾರೂಢರಾದರು. ತರುವಾಯ ಅಧ್ಯಕ್ಷ ಮಹೋದಯರು ಶ್ರೀ ಜಗದ್ಗುರು ರಂಭಾಪುರಿ ಮಹಾಸ್ವಾಮಿಗಳವರ ಆಶೀರ್ವಾದಪತ್ರಿಕೆಯನ್ನು ಓದಿಹೇಳಿ ತಮ್ಮ ಭಾಷಣವನ್ನು ಪ್ರಾರಂಭಿಸಿದರು. ಕ್ರಮತಪ್ಪದೆ ಪ್ರತಿವರ್ಷದಲ್ಲೂ ಸಭಾಸಕ್ತತೆ, ಸಮಾಜಶೈಥಿಲ್ಯಕಾರಣ, ಪ್ರಯತ್ನಗಳು ಮತ್ತು ಕೃತಿಗಳು, ಕೃಷಿಕರ್ಮ ಸುಧಾರಣೆ, ಸ್ವದೇಶವಸ್ತ್ರಧಾರಣ, ಮೊದಲಾದ ಅನೇಕ ವಿಷಯಗಳನ್ನು ವಿಮರ್ಶಿಸಿ, ಸಭಿಕರಿಗಾನಂದವುಂಟಾಗುವಂತೆ ಸರಸವಾದ ಭಾಷಣವನ್ನು ಮಾಡಿದರು. ಮರುದಿವಸವೂ ಇದೇ ಪ್ರಕಾರ ಸಭೆಯು ಪ್ರಾರಂಭವಾಗಿ ಅನೇಕ ಲೌಕಿಕಪುರುಷರಿಂದಲೂ ಮತ್ತು ಸ್ವಾಮಿಗಳಿಂದಲೂ ನಿಯಮಿತಗಳಾದ ವಿಷಯಗಳ ಮೇಲೆ ಭಾಷಣಗಳು ಮಾಡಲ್ಪಟ್ಟವು.

ಈ ಮಹಾಸಭೆಗೆ 1600 ಜನ ಪ್ರತಿನಿಧಿಗಳೂ 2 ಸಾವಿರದವರೆಗೆ ಪ್ರೇಕ್ಷಕರೂ ಆಗಮಿಸಿದ್ದರು. ಇವರೆಲ್ಲರಿಗೂ ವಾಸ ಭೋಜನಾದಿಗಳ ವಿಷಯದಲ್ಲಿ ಸ್ವಾಗತಮಂಡಳಿಯವರು ಬಹು ಯೋಗ್ಯವಾದ ಏರ್ಪಾಟನ್ನು ಮಾಡಿದ್ದರು. ಈ ಸಭೆಯು ಕಾರ್ಯವೆಲ್ಲವು ಮುಗಿದ ಮೇಲೆ ಕೆಲವು ಠರಾವುಗಳು ಪಾಸಾದವು. ಈ ಠರಾವುಗಳಲ್ಲಿ ಕೆಲವು ಠರಾವುಗಳು ಧರ್ಮಶಾಸ್ತ್ರತತ್ತ್ವವನ್ನು ಅವಲಂಬಿಸುವುದರಿಂದ ಈ ವಿಷಯವನ್ನು ಮತಸ್ಥಾಪನಾಚಾರ್ಯರ ಸನ್ನಿಧಿಯಲ್ಲಿ ಅರಿಕೆಮಾಡಿಕೊಂಡು ಪಾಸುಮಾಡತಕ್ಕದ್ದಿತ್ತು. ಹಾಗೆ ಮಾಡದೆ ಕೇವಲ ಸ್ವತಂತ್ರದಿಂದ ತಮ್ಮೊಳಗೆ ತಾವೇ ಮಾಡಿಕೊಂಡಿರುವುದನ್ನು ನೋಡಿದರೆ ಪರಮಾಶ್ಚರ್ಯವೆನಿಸುತ್ತದೆ. ಧರ್ಮಗುರುಗಳ ಅಜ್ಞೆಯನ್ನು ಪಡೆಯದೆ ಹೀಗೆ ಧರ್ಮಸಂಬಂಧಿ ಠರಾವುಗಳನ್ನು ಮಾಡುವುದು ಮಹಾಸಭೆಯವರಿಗೆ ಎಷ್ಟು ಭೂಷಣವಾದುದಲ್ಲವೆಂದು ಹೇಳದೆ ಇರಲಾರೆವು. ನಮ್ಮ ಮಾಡಿರುವ ಧರ್ಮಸಂಬಂಧಿ ಠರಾವುಗಳ ವಿಷಯವನ್ನು ಧರ್ಮಪೀಠಾಚಾರ್ಯರ ಸನ್ನಿಧಿಗೆ ತಿಳಿಸಿ ಅವರ ಅಪ್ಪಣೆಯನ್ನು ಪಡೆದು ಅವರ ಅಪ್ಪಣೆಯಂತೆ ವರ್ತಿಸುವದೇ ಪ್ರತಿಯೊಬ್ಬ ವೀರಶೈವರ ಕರ್ತವ್ಯವಾಗಿದೆ. ಈ ವಿಷಯವನ್ನು ಮಹಾಸಭೆಯ ಚಾಲಕರು ಪೂರ್ಣಗಮನಕ್ಕೆ ತಂದು ಆದರಂತೆ ಜರುಗಿ ಧನ್ಯರಾಗಬೇಕೆಂದು ಹಾರೈಸುತ್ತೇವೆ.

ಒಳದೇಶದ ವೃತ್ತಾಂತಗಳು.

ದಿವಾನರವರು ಚಿತ್ರದುರ್ಗದ ಡಿಸ್ಟ್ರಿಕ್ಟಿನ ಸಂಚಾರವನ್ನು ಪೂರೈಸಿಕೊಂಡು ಕಳೆದ ೨೮ನೇ ತಾರೀಖಿನ ದಿವಸ ಬೆಂಗಳೂರಿಗೆ ಆಗಮಿಸಿದರು.

ಹೋದತಿಂಗಳು ಬೆಂಗಳೂರಲ್ಲಿ ಕಮಲಾಛತ್ರದ ಹಿಂದಿರುವ ಒಂದು ಭಾವಿಯಲ್ಲಿ ಒಬ್ಬ ವೀರಶೈವಕ ಸ್ತ್ರೀಯು ಬಿದ್ದು ಪ್ರಾಣವನ್ನು ಬಿಟ್ಟಳು. ಪೋಲೀಸಿನವರು ವಿಚಾರಣೆಮಾಡುತ್ತಿರುವರು.

ಕಾಶೀಮಹಾರಾಜರವರ ಜ್ಞಾತಿಗಳಾದ ರಾಜಾ ಸರ್ ಮೋತೀಚಂದರವರು ರಾಯಬಹದ್ದೂರ್ ವಲ್ಲಭದಾಸರವರೊಡನೆ ರಾಜಧಾನಿಗೆ ದಯಮಾಡಿಸಿ ಎರಡು ದಿವಸಗಳ ವರಿವಿಗೂ ವಸಂತಮಹಲಿನಲ್ಲಿ ಸನ್ಮಹಾಪ್ರಭುಗಳ ಅತಿಥ್ಯದಲ್ಲಿದ್ದು ಹಿಂತಿರುಗಿ ಹೋದರು.

ಹುಬ್ಬಳ್ಳಿ ಜೀವನಾಧಾರ ಡಿಪೋದವರು ಜೀವನಾಧಾರ ... ಸಂಜೀವನೌಷಧದ ಪ್ರಸಿದ್ಧಪತ್ರಿಕೆಯನ್ನು ನಮ್ಮ ಕಡೆಗೆ ಕಳುಹಿಸಿರುತ್ತಾರೆ. ಈ ಪತ್ರಿಕೆಯನ್ನು ನಮ್ಮ ಚಂದಾದಾರರ ತಿಳುವಳಿಕೆಗಾಗಿ ನಮ್ಮ ಪತ್ರಿಕೆಯ ಜತೆಯಲ್ಲಿ ಹಂಚಿದ್ದೇವೆ. ಹಾಗೂ ಇವರು ನಮ್ಮ ಡಿಪೋದ ಅತಿ ಸುಂದರವಾದ ಕ್ಯಾಲೆಂಡರನ್ನು ಕಳುಹಿಸಿದ್ದಾರೆ. ಇದನ್ನು ಅತ್ಯಾನಂದದಿಂದ ಸ್ವೀಕರಿಸಿದ್ದೇವೆ.

ಕೆಲವು ಗ್ರಾಮಗಳಲ್ಲಿ ಪಡಪ (ಪಜಾಮ) ಪಂಕ್ತಿಯಲ್ಲಿ ಭೋಜನಮಾಡಬೇಕೆಂದು ಹಲಕೆಲವರು ವಿಶೇಷ ಪ್ರಯತ್ನ ಮಾಡುತ್ತಿದ್ದಾರೆಂದು ಕೇಳುತ್ತೇವೆ. ಧರ್ಮಶಾಸ್ತ್ರವಿರುದ್ಧವಾಗಿ ವರ್ತಿಸಿ ಹೀಗೆ ಮತವನ್ನು ಸಂಕರಮಾಡಿ ಶೂದ್ರಪಂಕ್ತಿಯೊಳಗೆ ಎಳೆಯುವ ಪ್ರಯತ್ನವಿಗೆ ಯಾವ ಪ್ರಯೋಜನವಾಗುವದೋ ತಿಳಿಯದಾಗಿದೆ. ಧರ್ಮಾಭಿಮಾನಿಗಳು ಈ ಕಾರ್ಯವನ್ನು ಹೋರಿನಿಂದ ನಿಷೇಧಮಾಡುವವರಿದ್ದಾರೆಂದು ತಿಳಿಯಬರುತ್ತದೆ.

ಹಿಂದಿನ ದಸರಾಮಹೋತ್ಸವಕಾಲದಲ್ಲಿ ಶ್ರೀಮನ್ಮಹಾರಾಜರವರ ಪ್ರಥಮ ಮಂತ್ರಿವರ್ಯರಾದ ಮಿ|| ಕೆ. ಶಾಂತಿ ಬಿ.ಎ., ಯವರಿಗೆ ರಾಜಸಭಾಭೂಷಣ ಎಂಬ ಪ್ರಶಸ್ತಿಯನ್ನು ದಯಪಾಲಿಸಿದುದಕ್ಕಾಗಿ ಮಿ|| ಶಾಂತಿಯವರನ್ನು ಅಭಿನಂದಿಸುವದಕ್ಕೋಸ್ಕರ ಕಳೆದ 31 ನೇ ತಾರೀಖಿನಲ್ಲಿ ಬೆಂಗಳೂರು ಲಾಲ್‌ಬಾಗಿನಲ್ಲಿರುವ ಗಾಜಿನ ಮಂಟಪದಲ್ಲಿ ಒಂದು ಸತ್ಕಾರಕೂಟವನ್ನು ಏರ್ಪಡಿಸಿದ್ದರು. ಈ ಕೂಟಕ್ಕೆ ಎಲ್ಲಾ ಡಿಸ್ಟ್ರಿಕ್ಟುಗಳಿಂದಲೂ ಪ್ರತಿನಿಧಿಗಳು ಬಂದಿದ್ದರು. ಈ ಸಮಯದಲ್ಲಿ ವೀರಶೈವಮಹಾಸಭೆ ಇದ್ದುದರಿಂದ ವೀರಶೈವ ಜನಸಂಖ್ಯೆಯು ವಿಶೇಷವಾಗಿದ್ದಿತಲ್ಲದೆ ಈ ಮಹಾಸಮಾರಂಭವು ಅಪೂರ್ವವಾಗಿದ್ದಿತು.

ವರ್ತಮಾನಸಂಗ್ರಹ.

ಕೊಲ್ಹಾಪುರದಲ್ಲಿ ಕಳ್ಳರ ಉಪದ್ರವವು ಹೆಚ್ಚಿದೆಯೆಂದು ತಿಳಿಯಬರುತ್ತದೆ.

ಬರ್ಮಾದೇಶದಲ್ಲಿ ಗುಲಾಮಗಿರಿಯಲ್ಲಿದ್ದ 3000 ಜನರನ್ನು ಸರ್ಕಾರದವರು ಬಿಡುಗಡೆಮಾಡಿರುವರು.

ಲಾಹೋರದ ಮಾಣಿಕ್ಯಚಂದ ಎಂಬುವರನ್ನು ಕೊಲೆಮಾಡಿದ ಫೀರೋಜ್‌ದೀನ್ ಎಂಬುವನನ್ನು ಕಳೆದ ತಿಂಗಳು 21ನೆ ತಾರೀಖಿನ ದಿವಸ ಗಲ್ಲಿಗೆ ಏರಿಸಿದರು.

ಮದ್ರಾಸ್ ಪ್ರದರ್ಶನಶಾಲೆಯಲ್ಲಿ ಫ್ರಾನ್ಸಿನಿಂದ ತರಿಸಿದ ಒಂದು ಯಂತ್ರವು ಬಂದಿದ್ದು ಒಂದು ದಿವಸಕ್ಕೆ 1,30,000 ಗ್ಯಾಲನ್ ನೀರನ್ನು ಎತ್ತುವುದಂತೆ!

ಅಲಹಾಬಾದಿನಲ್ಲಿ ಕಳೆದ ತಿಂಗಳು ೨೭ನೇ ತಾರೀಖಿನದಿವಸ ಕೌನ್ಸಿಲ್ಲಿನಲ್ಲಿ ಸ್ವರಾಜ್ಯವಾದಿಗಳಾದ ಮೆಂಬರು ಗವರ್ನರವರು ಬಂದಕೂಡಲೆ ಎದ್ದುಹೋದರಂತೆ!

ಸಾಂಗಲಿ ಸಂಸ್ಥಾನದಲ್ಲಿ ಗೋವಧೆಯನ್ನು ಮಾಡಕೂಡದೆಂದು ಅಲ್ಲಿಯ ಮ್ಯಾಜಿಸ್ಟ್ರೇಟರವರು ಹುಕುಂ ಮಾಡಿರುವರೆಂದು ತಿಳಿಯಬರುತ್ತದೆ. ಇದು ಸ್ತುತ್ಯವಾದ ಹುಕುಂ.

ಮಹಾತ್ಮಾ ಗಾಂಧೀಯವರ ಶರೀರದಲ್ಲಿ ಆರೋಗ್ಯವಿಲ್ಲದಿದ್ದರೂ ರಾಷ್ಟ್ರೀಯ ಮಹಾಸಭೆಗೆ ಆಗಮಿಸಿದ್ದು ಕೂಡಲೆ ಅಹಮದಾಬಾದಿಗೆ ಪ್ರಯಾಣ ಮಾಡುವವರಿರುತ್ತಾರೆ.

ಪಾಂಡಿಚೇರಿಯ ಕಾಯಿದೆ ಕೌನ್ಸಿಲ್ ಸಭೆಗೆ ಅಧ್ಯಕ್ಷರನ್ನು ಚುನಾಯಿಸುವ ಸಮಯದಲ್ಲಿ ಮೆಂಬರೊಳಗೆ ಮತಭೇದವು ಹುಟ್ಟಿ ಭಯಂಕರವಾದ ಹೊಡೆದಾಟವುಂಟಾಗಿ ಒಬ್ಬರ ಕುರ್ಚಿಗಳು ಒಬ್ಬರಮೇಲೆ ಬಿದ್ದವಂತೆ!

ಧಾರವಾಡ ಮ್ಯುನಿಸಿಪಾಲಿಟಿಯ ಮೆಂಬರರೂ ಕಾಟನ್‌ಸೇಲ್ ಸೊಸೈಟಿಯ ಕಾರಕೂನರೂ ಆದ ರುದ್ರಯ್ಯನವರಮೇಲೆ ಇವರು ಸೊಸೈಟಿಯ ಹಣವನ್ನು ದುರುಪಯೋಗ ಮಾಡಿದರೆಂಬ ವಿಷಯವಾಗಿ ಬಟ್ಲಿಯಾಗಿದೆ.

ಮೋಟಾರು ನಡೆಸುವ ಸಮಯದಲ್ಲಿ ಮಾರ್ಗಸ್ಥರನ್ನು ಅಪಾಯಕ್ಕೀಡುಮಾಡಿದ ಜೈನುಲ್ಲಾಬುದ್ದೀನ್ ಮತ್ತು ಶಿರಾವ್ರ ಎಂಬವರಿಗೆ ಲಕ್ನೋಪಟ್ಟಣದ ಮ್ಯಾಜಿಸ್ಟ್ರೇಟರವರು ಒಂದುಸಾವಿರ ರೂಪಾಯಿಗಳ ದಂಡವನ್ನು ವಿಧಿಸಿದರು.

ಲಾಲಾಲಜಪತರಾಯರವರು ಮುಂದೆ ನೆರವೇರುವ ಅಸೆಂಬ್ಲಿಯಲ್ಲಿ 21 ವರ್ಷ ವಯಸ್ಸಿನೊಳಗಿರುವವರನ್ನು ಮತಾಂತರಗೊಳಿಸುವದು ಅಪರಾಧವೆಂಬ ಬಗ್ಗೆ ಕಾನೂನು ಮಾಡಬೇಕೆಂಬದಾಗಿ ಚರ್ಚಿಸುವವರಾಗಿರುವರೆಂದು ತಿಳಿದುಬರುತ್ತದೆ.

ಕಳೆದ ತಿಂಗಳು ೨೧ನೇ ತಾರೀಖಿನ ದಿವಸ ಲಂಡನ್ ಪಟ್ಟಣದಲ್ಲಿ ಮಂಜು ವಿಶೇಷವಾಗಿ ಬಿದ್ದುದರಿಂದ ಬೀದಿಗಳಲ್ಲಿ ತಿರುಗಾಡಲು ಅವಕಾಶವೇ ಇದ್ದಿಲ್ಲವಂತೆ? ಒಂದೂವರೆ ಸಾವಿರ ಜನಗಳವರಿವಿಗೂ ಕಾಲುಜಾರಿ ಬಿದ್ದು ಅಪಾಯವು ಸಂಭವಿಸಿ ಆಸ್ಪತ್ರೆಗಳಿಗೆ ಸಾಗಿಸಲ್ಪಟ್ಟರಂತೆ!

ಜಪಾನಿನಲ್ಲಿ ಓರ್ವ ಪ್ರಮುಖನಾದ ನಾವಿಕನು ಸ್ವಲ್ಪದಿವಸಗಳಲ್ಲಿ ಎರಡು ಹಡಗುಗಳು ನನ್ನ ಅಜಾಗರೂಕತೆಯಿಂದ ಒಂದಕ್ಕೊಂದು ತಾಕುಬಡಿದು ಅನೇಕರಿಗೆ ಅಪಾಯವು ಸಂಭವಿಸಿತು. ಇದಕ್ಕೆ ನಾನೇ ಭಾಗಿಯಾಗಿರುವೆನೆಂದು ಒಂದು ಪತ್ರವನ್ನು ಬರೆದಿಟ್ಟು ಆತ್ಮಹತ್ಯವನ್ನು ಮಾಡಿಕೊಂಡನು.

ಕಾಶೀಪಟ್ಟಣದಲ್ಲಿರುವ ದಯಾನಂದ ಸ್ಕೂಲಿನ ಹೆಡ್ಮಾಸ್ತರರವರು 21 ಜನ ವಿದ್ಯಾರ್ಥಿಗಳು ಪ್ರಾರ್ಥನೆಯ ಸಮಯದಲ್ಲಿ ಬರಲಿಲ್ಲವೆಂದು ಅವರನ್ನು ಹೊಡೆದುದಕ್ಕಾಗಿ, ವಿದ್ಯಾರ್ಥಿಗಳು ಕೋಪಗೊಂಡು ಮರುದಿವಸ ದಾರಿಯಲ್ಲಿ ಮಾಸ್ತರನ್ನು ಹೊಡೆದರಂತೆ! ಇದ್ದರೆ ಇಂತಹ ವಿದ್ಯಾರ್ಥಿಗಳೇ ಇರಬೇಕಲ್ಲವೆ!

ಮಿಸ್ ಮೇಯೊ ಎಂಬುವಳು ಬರೆದ ಮದರ್ ಇಂಡಿಯಾ ಎಂಬ ಪುಸ್ತಕವನ್ನು ನಿಷೇಧಮಾಡಿ ಕಲ್ಕತ್ತಾ, ಪೂನಾ, ಮದ್ರಾಸ್, ಅಹಮ್ಮದನಗರ ಮೊದಲಾದ ಸ್ಥಾನಗಳಲ್ಲಿರತಕ್ಕ ಮಿಷನರಿಗಳು ಖಂಡನರೂಪವಾಗಿ ಅನೇಕ ಪುಸ್ತಕಗಳನ್ನು ಬರೆದು ಸರ್ವತ್ರ ಪ್ರಚಾರ ಮಾಡಿರುವರು. ಇದಲ್ಲವೇ ಸತ್ಪುರುಷರ ಲಕ್ಷಣವು!

ಮುಂಬೈ ಸಮೀಪದಲ್ಲಿರುವ ಬಾಂದ್ರಾ ಎಂಬೂರಲ್ಲಿ ಒಬ್ಬ ಸ್ತ್ರೀಯಳು ವಿಚಿತ್ರ ಆಕೃತಿಯುಳ್ಳ ಮಗುವನ್ನು ಹೆತ್ತಿರುವಳು. ನಡುವಿನ ಮೇಲಿನಭಾಗವು ಮನುಷ್ಯಾಕಾರವಾಗಿಯೂ ಕೆಳಗಿನ ಭಾಗವು ಮೀನಿನ ಆಕಾರವಾಗಿಯೂ ಇರುವದಂತೆ! ಜನನವಾದೊಡನೆಯೆ ಮಗುವು ಮೃತಿಹೊಂದಿತು. ಈ ಮಗುವನ್ನು ಡಾಕ್ಟರು ಒಂದು ಗಾಜಿನ ಪಾತ್ರೆಯಲ್ಲಿ ಇಟ್ಟಿರುವರು. ಇದಲ್ಲವೇ ಮತ್ಸ್ಯಾವತಾರವು!

ಕಳೆದವಾರ ಮದ್ರಾಸ ಪಟ್ಟಣದಲ್ಲಿ ಹಿಂದೂಸಮ್ಮೇಳನವು, ಸಕಲವಸ್ತುಪ್ರದರ್ಶನವೂ, ಹಿಂದೂತರುಣರ ಸಮ್ಮೇಳನವೂ, ಪ್ರಕೃತಿ ಚಿಕಿತ್ಸಾ ಸಮ್ಮೇಳನವೂ, ಬ್ರಾಹ್ಮಣೇತರಯುವಕಸಮ್ಮೇಳನವೂ, ದಕ್ಷಿಣಭಾರತ ನಿರುದ್ಯೋಗಿಗಳ ಸಮ್ಮೇಳನವೂ, ಅಖಿಲಭಾರತ ಖಿಲಾಫತ್ ಸಮ್ಮೇಳನವೂ, ಆರ್ಯಸಮ್ಮೇಳನವೂ, ಸಂಗೀತಸಮ್ಮೇಳನವೂ, ರಾಷ್ಟ್ರೀಯ ಸೇವಾದಳಸಮ್ಮೇಳನವೂ, ಅಖಿಲಭಾರತ ಪುಸ್ತಕಭಂಡಾರ ಸಮ್ಮೇಳನವೂ, ಸಾಧುಸಂಘಸಮ್ಮೇಳನವೂ, ವರ್ಣಾಶ್ರಮಧರ್ಮ ಮಹಾಸಭೆಯು ಮುಂತಾದ ಅನೇಕ ಸಮ್ಮೇಳನಗಳು ಅತ್ಯಂತ ವೈಭವದಿಂದ ನೆರವೇರಿದವು.

ಸ್ವೀಕಾರ

ಶ್ರೀ ಶಂಭುಲಿಂಗಶಿವಾಚಾರ್ಯರಿಗೆ ವಿಜಾಪುರ ಹಿರೇಮಠದ ಪಟ್ಟಾಭಿಷೇಕ ಮಹೋತ್ಸವವು ನೆರವೇರಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ 25 ರೂಪಾಯಿಗಳನ್ನು ತೆಗೆದು ಕಳುಹಿಸಿರುತ್ತಾರೆ. ಈ ರೂಪಾಯಿಗಳು ಮ|| ರಾ|| ಅಂಬಲಿ ಗುರುಲಿಂಗಪ್ಪನವರ ದ್ವಾರಾ ತಲ್ಪಿರುತ್ತವೆ.

ದಾವಣಗೆರೆ ನಿವಾಸಿಗಳಾದ ಮ|| ರಾ|| ಶ್ರೀಮಂತ ಮಾಗಾನಹಳ್ಳಿ ಷಡಕ್ಷರಪ್ಪನವರ ಪುತ್ರರಾದ ಉಮಾಪತಪ್ಪನವರಿಗೆ ಪುತ್ರಜನನವಾದ ಸಂತೋಷಕ್ಕೋಸ್ಕರ ಪ್ರಭಾ ಪೋಷಣಕ್ಕಾಗಿ 5 ರೂಪಾಯಿಗಳನ್ನು ಕಳುಹಿಸಿದ್ದಾರೆ.

ಗದಗಪಟ್ಟಣನಿವಾಸಿಗಳಾದ ಮ|| ರಾ|| ಚನ್ನಪ್ಪ ಸಂಪಣ್ಣ ಜಿನಗಾ ಇವರ ಪುತ್ರಿಯಾದ ಶಿವವ್ವನನ್ನು ಮ|| ರಾ|| ಬೆಳಗಾನೂರು ಅಂಗಡಿ ರೇವಣಪ್ಪನವರ ಪುತ್ರ ಮಲ್ಲೇಶಪ್ಪನೆಂಬ ವರನಿಗೆ ಕೊಟ್ಟು, ಮಾರ್ಗಶಿರ ಬಹುಳ ಏಕಾದಶಿ ದಿವಸ ನಡೆದ ವಿವಾಹ ಸಮಾರಂಭದಲ್ಲಿ ಕನ್ಯಾದಾನವಾಗಿ ಪ್ರಭಾಪೋಷಣಕ್ಕಾಗಿ ತೆಗೆದು ಕಳುಹಿಸಿದ 4 ರೂಪಾಯಿಗಳು ಮ|| ರಾ|| ಚನ್ನಪ್ಪಾ ಜಿನಗಾ ಇವರ ದ್ವಾರಾ ತಲ್ಪಿರುತ್ತವೆ.

ಮುರಗೋಡ ಹಿರೇಮಠದ ನೀಲಮ್ಮನವರು ಶಿವಾಧೀನರಾದ ಸಮಯದಲ್ಲಿ ವೇ|| ರಾಚಯ್ಯಸ್ವಾಮಿ ಹಿರೇಮಠ ಇವರು ಪ್ರಭಾಪೋಷಣಕ್ಕಾಗಿ 2 ರೂಪಾಯಿಗಳನ್ನು ಕಳುಹಿಸಿರುತ್ತಾರೆ.

ಬುಕ್ಕಾಂಬುಧಿಯ ಮ|| ರಾ|| ನೆಲ್ಲಿ ಅಂಕಲ ಚನ್ನಪ್ಪಯ್ಯನವರು ಶಿವಾಧೀನರಾದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಒಂದು ರೂಪಾಯಿಯನ್ನು ಮ||ರಾ|| ಜಿ. ಎಚ್. ಮುರುಗಸಿದ್ದಪ್ಪನವರು ಕಳುಹಿಸಿರುತ್ತಾರೆ.

ರಾಮದುರ್ಗ ಸಂಸ್ಥಾನಕ್ಕೆ ಸೇರಿದ ಮುಳ್ಳೂರು ಗ್ರಾಮದ ಮ||ರಾ|| ಪಾಟೀಲ ಬಸವನಗೌಡರು ದತ್ತಪುತ್ರಸ್ವೀಕಾರ ಸಮಾರಂಭದಲ್ಲಿ ಪ್ರಭಾಪೋಷಣಕ್ಕಾಗಿ ತೆಗೆಯಿಸಿದ 5 ರೂಪಾಯಿಗಳು ಶ್ರೀಯುತ ವೀರನಗೌಡರು ಪಾಟೀಲ ಬೆಳ್ಳೇರಿ ಇವರ ದ್ವಾರಾ ತಲ್ಪಿರುತ್ತವೆ.

ಶ್ರೀ ಜಗದ್ಗುರು ಪಂಚಾಚಾರ್ಯರು ಈ ಮಹಾಶಯರುಗಳಿಗೆಲ್ಲ ನಿತ್ಯಸುಖವನ್ನೀಯಲೆಂದು ಹಾರೈಸುತ್ತೇವೆ.

ಸಂ.—

ವೀರಶೈವ ಮಹಾಸಭೆ.

ಮೊನ್ನೆ ಬೆಂಗಳೂರಲ್ಲಿ ನೆರವೇರಿದ ಈ ಸಭೆಯಲ್ಲಿ ಬಾಲವಿಧವೆಯರನ್ನು ಪುನಃ ವಿವಾಹ ಮಾಡಿಕೊಡಬೇಕೆಂದು ಠರಾವ್ ಪಾಸುಮಾಡಿದರು. ಈ ಠರಾವಿಗೆ ಅನುಮೋದನಕೊಟ್ಟ ಮಹಾಶಯರ ಮನೆಗಳಲ್ಲಿ ಅನೇಕ ಜನ ಬಾಲವಿಧವೆಯರು ಇರಬಹುದು; ಮೊದಲು ಇವರು ತಮ್ಮ ತಮ್ಮ ವಿಧವಾ ಬಾಲಿಕೆಯರನ್ನು ವಿವಾಹ ಮಾಡಿಕೊಟ್ಟು ಬಾರಿಗೆತಂದರೆ ಇವರ ಠರಾವುಗಳಿಗೆ ಮರ್ಯಾದೆಯು ಬರುತ್ತದೆ. ಇದನ್ನು ಅರಿಯರೋ ಏನು? ಮತ್ತು ಕೆಲಕೆಲವರು ಧರ್ಮಶಾಸ್ತ್ರವನ್ನೆ ಕಿತ್ತುಹಾಕಿ ಈ ಕಾಲದಲ್ಲಿ ಬೇರೆ ಧರ್ಮಶಾಸ್ತ್ರವನ್ನು ರಚಿಸಬೇಕೆಂದು ಹೇಳಿದರು. ಇವರಿಗೆ ಧರ್ಮನಿಂದಕರೆಂದು ಹೇಳಬೇಕೋ ಅಥವಾ ಮತ್ತಾವುದಾದರು ಪದವಿಯನ್ನು ಕೊಡಬೇಕೋ ಎನ್ನುವದನ್ನು ವಾಚಕರೇ ವಿಚಾರಿಸಬೇಕಾಗಿದೆ. ನಾಲ್ಕು ಇಂಗ್ಲೀಷ ಅಕ್ಷರಗಳನ್ನು ಕಲಿತರೆ ಇವರ ಕಣ್ಣುಗಳು ನೆತ್ತಿಯಮೇಲೆ ಬರುತ್ತವೆ. ಇಂಥವರ ಕಣ್ಣಿಗೆ ಧರ್ಮಶಾಸ್ತ್ರವು ಹೇಗೆ ಕಾಣೀತು? ಧರ್ಮಶಾಸ್ತ್ರವನ್ನು ನಿಂದಿಸಿ ಪಾಪಭಾಗಿಗಳಾಗುವದು ಯೋಗ್ಯವಲ್ಲ! ಯತೋಧರ್ಮಸ್ತತೋ ಜಯಃ!

ಪ್ರತ್ಯಕ್ಷದರ್ಶಿ.

ಪತ್ರವ್ಯವಹಾರ.

ಬಾತ್ಮೀದಾರರು, ಅಭಿಪ್ರಾಯ ... ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂದು ... ಸ್ಸು ... ಲಕ್ಷ್ಯದಲ್ಲಿಡತಕ್ಕದ್ದು. ಸಂ—

ಶ್ರೀ ಜಗದ್ಗುರು ಪಂಚಾಚಾರ್ಯರಿಗೆ ಜಯ

ಜಡೇಯೋಬಳಿಯಲ್ಲಿ ಶ್ರೀ ಜಗದ್ಗುರುಗಳವರ ಸಂಚಾರವು.

ಶ್ರೀಮತ್ಪಂಚಾಚಾರ್ಯ ... ಶ್ರೀ ಜಗದ್ಗುರು ... [illegible]

... ಜಗದ್ಗುರುಗಳ ದ್ವಿತೀಯ ವರ್ಷೋತ್ಸವವು ... ದಿಂದ ಅದನ್ನು ... ದಿವಸ ಸಂಸ್ಥಾನ ... ಜನರ ಭೋಜನಾದಿ ವ್ಯವಸ್ಥೆಯನ್ನು ... ಬಹುದಿವಸಗಳವರೆಗೂ ಇದ್ದು ... ಸಂಸ್ಥಾನಕ್ಕೆ ... ಮಹಾಸನ್ನಿಧಿಯ ಅಪ್ಪಣೆ ಪ್ರಕಾರ ... ರೂಪಾಯಿಗಳ ಬೆಲೆಯುಳ್ಳ ಸುವರ್ಣರಜತಮಿಶ್ರವಾದ ಸಿಂಹಾಸನವನ್ನು ... ಗೌಡರೂ ... ಪಟೇಲ ಹಾಲಪ್ಪಗೌಡರೂ ಸೇರಿ ಮಹಾಸಾವಕ್ಕೆ ... ಅರ್ಪಣ ಕೊಟ್ಟರು ... "ಗುರುಭಕ್ತಿಯೇ ... ಸಫಲವು"

ಈ ರೀತಿಯಾಗಿ ... ಜಗದ್ಗುರುಗಳವರು ... ಕೆಂಪಣ್ಣನವರ ಸೋದರಿ ... ತಾ|| ... ಎರಡು ದಿವಸ ... ಜಗದ್ಗುರುಗಳವರು ... ಶ್ರೀ ಜಗದ್ಗುರು ... ಜಡೆ ಮಠದ ... [illegible]

ಶ್ರೀಮತ್ಪಂಚಾಚಾರ್ಯಪ್ರಸೀದಂತು.

ಶ್ರೀ ಎತ್ತಗದೆ ಗುರುಮನೆ, ಮತ್ತು ಪಂಚಾಚಾರ್ಯಪ್ರಭಾಭ್ಯುದಯಪ್ರಕಾರ.

ಶ್ರೀಮದ್ಜಗದ್ಗುರು ಪಂಚಾಚಾರ್ಯ ... ಗುರುಪೀಠ ಪರಂಪರಾಗತರಾದ ಶ್ರೀ ಎತ್ತಗದೆ ಗುರುಮನೆಯು ... ಪ್ರಸಿದ್ಧ ಮಠಗಳಲ್ಲೊಂದಾಗಿರುತ್ತದೆ. ಇದು ... ತಾಲೂಕಿನಲ್ಲಿರುತ್ತದೆ. ಈ ಮಠದ ... ಉತ್ತರಖಂಡ ... ಗೋಪಿಕಾನಂದ ... ಸ್ಥಳಗಳಲ್ಲಿ ... ಹಾಗೆಯೇ ದಕ್ಷಿಣ ... ಸ್ಥಳಗಳಲ್ಲಿ ನೆಲೆಸಿದ್ದು ... ಇವರು ... ಪರಮೇಶ್ವರ ... ಶ್ರೀ ಸಿದ್ದಲಿಂಗ ... [illegible]

ಪ್ರಾಯೋಕ್ಷ್ಮರಾಚಾರ್ಯರು ಎಂಬ ಅಭಿಧಾನವನ್ನು ಸಾರ್ಥಕಪಡಿಸಿಕೊಂಡಿರುತ್ತದೆ. ಈ ಮಠಕ್ಕೆ ಶ್ರೀ ಕೃಷ್ಣರಾಜಒಡೆಯರವರಿಂದ ಶ್ರೀರಂಗಪಟ್ಟಣದ ಮಹಾ ಸಂಸ್ಥಾನಮುದ್ರೆ ಸಾರ್ವಗುಣಸಿಂಹಚಿಕ್ಕೊವರಾದವ ಕಾರುಗಹಳ್ಳಿಯಸ್ಥಲವಾದ ಗುರುಪಟ್ಟನ್ನು ಶಾಲಿವಾಹನಶಕ ೧೪೯೫ ರಲ್ಲಿ ಸರ್ವಮಾನ್ಯವಾಗಿ ಕೊಟ್ಟು ಒಗ್ಗ ಸ್ಥಾಪಿಸಿದ ಶಿಲಾಶಾಸನವು ಇರುತ್ತದೆ. ಈ ಗ್ರಾಮವು ರಾಜಧಾನಿಗೆ ದಕ್ಷಿಣದಲ್ಲಿ ಮೂರುಮೈಲಿ ದಲ್ಲಿರುತ್ತದೆ ಪರರಾಜರ ಲೂಟಿಕಾಲದಲ್ಲಿ ಇದು ಸರ್ಕಾರಕ್ಕೆ ಸೇರಿತೆಂದು ತಿಳಿಯುತ್ತದೆ ಈ ಪರರಾಜರ ಕಾಲದಲ್ಲೇ ಈ ಸ್ವಾಮಿಗಳ ವಂಶಜರು ಗುರುಸ್ಥಾನ ಬಿಟ್ಟು ಶ್ರೀ ಚಿತ್ರಗಡಮಠದಲ್ಲಿ ನೆಲೆಸಿರುತ್ತಾರೆ. ಇವರಿಗೆ ನಂಜರಾಜ ಒಡೆಯರವರು, ನವಾಬ್ ಹೈದರಲೀಖಾನ್ ಬಹದ್ದೂರ್ ರವರು, ಬಾಲ ಚಾಮರಾಜ ಒಡೆಯರವರು, ಮುಮ್ಮಡಿ ಕೃಷ್ಣರಾಜೇಂದ್ರ ಒಡೆಯರವರು ಸರ್ವಾಧಿಕಾರಿ ಬಾಳಾಜೀ ಅರಸರು. ಅಜಿಕರ್ಸ್ ಕವಿರಾಜನರಸ ಇರಾಪಿರಾ ಸವರ್ನರ ಕೊಂಸಣಬಹದ್ದೂರು ಪ್ರಾಂತ್ಯ ಮೈಸೂರು ಫೌಜು ದಳವಾಯಿ ದೇವರಾಜಯ್ಯನವರು, ಶ್ರೀ ಕಾರುಸ, ದಿವಾನ್ ಲಿಂಗರಾಜಯ್ಯ ಅರಸಿನವರು, ಅಷ್ಟಗ್ರಾಮದ ಫೌಜುದಾರ ವೆಂಕಟರಮಣಯ್ಯನವರು ಮೊದಲಾದವರು. ಅನಂತರವಾಗಿ ಸನ್ನದುಗಳನ್ನು ಕೊಟ್ಟು ವಿಸ್ತರಣವಾಗಿ ಉಂಬಳಿವಿಚಾರಣೆ ನಡೆಸಿಕೊಂಡು ಬಂದಂತೆ ಪೂರ್ವದ ಮಾಮೂಲನ್ನನುಸರಿಸಿ ಅಧಿಕಾರವನ್ನು ಹೆಚ್ಚಿಸಿರುತ್ತಾರೆ ಇದರಂತೆ ಪ್ರತಿತಾಲೂಕು ಮಾಮಲೇದಾರರುಗಳೂ, ಆಯಾಯ ಇರಾಖಾ ಮುನ್ಸ್ಯಾದಿಕಾರಿಗಳೂ, ಅನಂತರವಾಗಿ ದಸ್ತಾವೇಜುಗಳನ್ನು ಕೊಟ್ಟು ಈ ಮಠಕ್ಕೆ ಸಹಾಯಕರಾಗಿರುತ್ತಾರೆ ಈ ಮಠದವರು ಸಂಚಾರಮಾಡುವಕಾಲದಲ್ಲಿ ಪಾಲಕಿ, ಛತ್ರಿ ಚಾಮರ, ಪಾಲಗ, ಪಂಜಂತ್ರಿ, ಕೊಂಬು, ಕಹಳೆ, ತಮ್ಮಟೆ, ಕಹಳೆ, ನಗಾರಿ, ದಂಡಿಕೋಲು, ನಂದಿವೀರ, ನಂದೀಧ್ವಜ ದವಾಲಿಪಲ್ಲೆ ಸಮೇತ ದಲಾಯತ್ತು ಕುದುರೆಗಳು, ಜೋಡಿಕುದುರೆ ಗಾಡಿಗಳು, ಬಿರುದು, ಕತ್ತಿ, ಹಸರುಕಟ್ಟಿಗೆ ಬೆಳ್ಳಿಕಟ್ಟಿಗೆ, ಗಗ್ಗರಿ ಕೋಲು ಮೊದಲಾದ ಇನ್ನೂ ಅನೇಕ ಬಿರುದುಗಳ ಸಮೇತ ಆಯಾಯ ಕಸಬುದಾರರನ್ನೊಡಗೊಂಡು ಉತ್ಸವಮಾಡಿಕೊಂಡುಹೋಗುವದು ಪದ್ಧತಿಯಾಗಿ ನಡೆದುಬಂದಿರುತ್ತದೆ ಈ ಮಠದ ಸ್ವಾಮಿಗಳ ವಂಶದವ ಕಾರುಗಹಳ್ಳಿಯ ಮಾರನಾಯಕನ ದುರ್ಮಾರ್ಗದ ಕಾಲದಲ್ಲಿ ಯದುಮಹಾರಾಜರಿಗೂ ಮೈಸೂರು ರಾಜ ಬಾಲಕರೂ ಸಂಬಂಧವನ್ನುಂಟುಮಾಡಿ ಸದ್ಯದ ಸಂತತಿಯು ಸಾರ್ವಭೌಮರಾಗಿ ನಡೆಯುವದಕ್ಕೂ ಮಾರನಾಯಕನ ಬಲವು ತಗ್ಗುವದಕ್ಕೂ ಕಾರಣಪುರುಷರಿರುತ್ತಾರೆ ಈ ಕಾರಣದಿಂದಲೇ ಹಿಂದಿನಿಂದ ಅಧಿಕಾರವನ್ನು ನಮ್ಮ ಮಹಾಪ್ರಭುಗಳವರು ಅನುಗ್ರಹಿಸಿ ತಮ್ಮ ಸಹಾನುಭೂತಿಯನ್ನು ತೋರ್ಪಡಿಸಿರುತ್ತಾರೆ.

ಈ ರೀತಿ ಈ ಮಠವು ಬಹು ಪ್ರಾಚೀನಕಾಲದಿಂದಲೂ ಗುರುಸ್ಥಾನಾಧಿಕಾರದ ವೈಭವವನ್ನು ಮೆರಯಿಸಿಕೊಂಡು ಮೂಲ ಗುರುಪೀಠವಾದ ಶ್ರೀ ಹಿಮವತ್ಕೇದಾರ ಸಿಂಹಾಸನದ ಮತವನ್ನು ಸ್ವೀಕ್ಯಾತಿಗೆ ತಂದು ದಕ್ಷಿಣಹಿಂದುಸ್ಥಾನಕ್ಕೆ ಸೇರಿದ ಮೈಸೂರು ಸಂಸ್ಥಾನದಲ್ಲಿ ಪ್ರಸಿದ್ಧಿಯಾಗಿರುವ ಈ ಮಠದ ಯಶಸ್ಸನ್ನು ಕೇಳದ ಯಾವ ವೀರಶೈವರಿಗಾದರೂ ಆನಂದವಾಗದಿಲ್ಲ? ಈ ಮಠದ ಸವಿಸ್ತಾರ ಸಂಗತಿಯು ನಾನು ಬರೆಯಬೇಕೆಂದಿರುವ ಚರಿತ್ರೆಯಲ್ಲಿ ಸಂಪೂರ್ಣವಾಗಿ ಕಾಣಬರಾಗುತ್ತೆ ಈ ರೀತಿ ನಡೆದುಬಂದಿರುವ ಈಗಿನ ಗುರು ಸ್ವಾಮಿಗಳವರಾದ ಶ್ರೀ|| ರಾ|| ಮೊತ್ತರಾಮರಾಧ್ಯ ಸ್ವಾಮಿಗಳವರು ತಮ್ಮ ಪೂರ್ವಜರಂತೆಯೇ ಧರ್ಮರಕ್ಷಣಾದಿ ವಿಷಯದಲ್ಲಿ ವಿಶೇಷ ಶ್ರದ್ಧೆಯನ್ನು ವಹಿಸಿರುತ್ತಾರೆ ಮತವನ್ನುಂಥವಾದ ವಿವಾದದಲ್ಲಿ ಬಹಿಷ್ಕಾರ ಹೊಂದಿದ ಜನಗಳು ಕ್ರಿಮಿನಲ್ ಕೋರ್ಟ್ ನ್ಯಾಯ ಮಾಡಲು ಕೋರ್ಟಿಗೆ ತಾವು ಹೋಗದಂತೆ ಫಿರ್ಯಾದು ಮಾಡಿಸಿಕೊಂಡು ಬಹಿಷ್ಕಾರವು ನ್ಯಾಯ ಆಗುವಂತೆ ಮದ್ರಾಸ್ ಹೈಕೋರ್ಟ್ ಮತ್ತು ಪ್ರಿವಿಕೌನ್ಸಿಲ್ ಜಡ್ಜ್‌ಮೆಂಟುಗಳಾಗಬೇಕಾದರೆ ಇವರ ಬುದ್ಧಿಕೌಶಲ್ಯವೂ ಧರ್ಮಾಭಿಮಾನವೂ ಎಷ್ಟು ದಿಗ್ದರ್ಶನಗಳಾಗಿರುವುದು? ಇಂಥಾ ಜಡ್ಜ್‌ಮೆಂಟುಗಳು ಶ್ರೀ ಮಠದಲ್ಲಿ ಅನೇಕವಿರುತ್ತವೆ. ಮತವನ್ನುಂಥವಾದ ವಿವಾದದ ಯಾವ ತೀರ್ಪಿನಲ್ಲಿಯೂ ಧರ್ಮಜಾಗ್ರತೆಯ ಉಪದೇಶವೇ ಮೂಲಮಂತ್ರವಾಗಿರುತ್ತದೆಂಬುದು ಶ್ರೀಮಠದ ಪ್ರತಿಯೊಂದು ರೆಕಾರ್ಡಿನಲ್ಲಿಯೂ ಪ್ರಜ್ವಲಿಸುತ್ತಾ ಇದೆ. ಇದರಿಂದ ಇವರ ವೀರಮಾಹೇಶ್ವರಾಚಾರ್ಯತ್ವವೂ, ಧರ್ಮಾಭಿಮಾನವೂ ಘುಮುಘುಮಿಸುತ್ತಾ ಇದೆ. ಯಾವ ವಿಷಯಕ್ಕಾಗಲಿ ಸಾಲ್ಕಾರು ಜನಗಳು ಮಠಕ್ಕೆ ಬಂದಕಾಲದಲ್ಲಿ ಇದನ್ನೇ ಬೋಧಿಸುವರು. ತಾರೀಖು 13-12-1927 ನೇ ದಿವಸ ತೊಂಡವಾಡಿ ಮಠದ ವೇ|| ನಂಜುಂಡಾರಾಧ್ಯರು, ಮುಡುವಿನಹಳ್ಳಿ ಪಟೇಲ್ ಒಸಪ್ಪನವರು, ಚನ್ನಗುಂಡಿ ಗುರುಸಿದ್ದಪ್ಪನವರು, ಮುತ್ತಿಗೆ ಪುಟ್ಟಸೋಮಪ್ಪನವರು ಮುಂತಾದವರು ಚೆನ್ನಾಗಿ ಮಠದಲ್ಲಿ ಸಭೆ ಸೇರಿದಾಗ್ಯೂ, "ಲೋಕಮಾನ್ಯ ಶ್ರೀ|| ಕಾಶೀನಾಥಶಾಸ್ತ್ರಿಗಳು ಸ್ವಾರ್ಥತ್ಯಾಗಮಾಡಿ ಮೈಸೂರು ರಾಜಧಾನಿಯಲ್ಲಿ ಪಂಚಾಚಾರ್ಯ ಪ್ರಿಂಟಿಂಗ್ ಪ್ರೆಸ್ಸನ್ನು ಸ್ಥಾಪಿಸಿರುವದಲ್ಲದೆ ಆಚಾರ್ಯರ ಹೆಸರಿನ ಮೇಲೆ ಪಂಚಾಚಾರ್ಯಪ್ರಭಾ ಎಂಬ ವಾರಪತ್ರಿಕೆಯನ್ನು ಹೊರಡಿಸಿ ಅದರಲ್ಲಿ ಮತತತ್ವಗಳನ್ನು ಬೋಧಿಸಿ ಸಮಾಜೋಪಕಾರವನ್ನಾಡುತ್ತಾ ಇರುತ್ತಾರೆ ಈ ಪತ್ರಿಕೆಯನ್ನು ಅವಶ್ಯಕವಾಗಿ ತರಿಸಬೇಕು ಎಂದು ಬೋಧಿಸಿ ಶ್ರೀ ಗುರುಶಾಂತಶಾಸ್ತ್ರಿಗಳು ಈ ಪತ್ರಿಕೆಗೆ ಸಂಪಾದಕರಾಗಿರುವದನ್ನೂ, ಶ್ರೀ ಕಾಶೀನಾಥಶಾಸ್ತ್ರಿಗಳವರ ಅನವರತಸೇವೆಯನ್ನೂ ಹೃದಯದ್ರಾವಕವಾಗುವಂತೆ ಪ್ರತಿಪಾದಿಸಿ ಇವರಲ್ಲರ ತಿಳಿದುಕೊಳ್ಳಲೆಂದು ಮೇಲ್ಪಂಗ್ತಿಯಾಗಿ, ಬಂದು ಬಹಿಷ್ಕಾರ ವಿವಾದವು ತೀರ್ಮಾನವಾದ ಒಗ್ಗೆ ಪ್ರಭಾಭ್ಯುದಯಕ್ಕಾಗಿ ಶ್ರೀಗಳವರು ಎರಡು ರೂಪಾಯಿಗಳನ್ನು ತೆಗದಿಟ್ಟರು.' ಇದನ್ನೆಲ್ಲಾ ನೋಡಿ ಸಭೆಯವರು ಆಶ್ಚರ್ಯಚಕಿತರಾದರು. ತಕ್ಷಣವೇ ರೇವಣಾರಾಧ್ಯರು, ನಂಜುಂಡಾರಾಧ್ಯರು, ಪಟೇಲ್ ಬಸಪ್ಪನವರು, ಗುರುಸಿದ್ದಪ್ಪನವರು, ಪುಟ್ಟಸೋಮಪ್ಪನವರು ಚಂದಾದಾರರಾದರು

ಒರ್ವ ಪ್ರಭಾಭ್ಯುದಯಾಕಾಂಕ್ಷಿ.

ಅಷ್ಟಾವರಣಾಂತರ್ಗತ ಜಂಗಮರು ಯಾರು?

ಮಹಾಶಯರೇ, ಜಂಗಮರು ಆಗಬೇಕಾದರೆ ಕೇವಲ ವರ್ಣಗುರುಗಳಿಂದ ಚರಾಧಿಕಾರವನ್ನು ಪಡೆದರಾಗು ಗುರುಸ್ಥಲದವರಾಗಿ ಗುರುವಿನ ಆಜ್ಞಾನುಸಾರ ದೇಶಮಧ್ಯದಲ್ಲಿರುವ ಶಿಷ್ಯರ ಮೇಲೆ ಸಂಚರಿಸಿ ಸ್ವತಂತ್ರ್ಯವಾದ ವರ್ಣಗುರುಗಳ ಮಹತ್ವವನ್ನೂ ಧರ್ಮ ಸಿದ್ಧಾಂತವನ್ನೂ ಶಿಷ್ಯರಿಗೆ ಉಪದೇಶಿಸಿ ಶಿಷ್ಯರಿಂದ ಸಲ್ಲತಕ್ಕ ಕಪ್ಪಕಾಣಿಕೆಗಳನ್ನು ಸ್ವೀಕರಿಸಿ ಗುರುವಿನ ಇಚ್ಛೆಯನ್ನು ಪೂರೈಸುವಾತನೇ ಅಷ್ಟಾವರಣಾಂತರ್ಗತ ಜಂಗಮನವಾಚ್ಯನಾಗುತ್ತಾನೆ. ಹೀಗಿದ್ದ ಕೆಲ ವಿರಕ್ತರು ತಾವೇ ಅಷ್ಟಾವರಣಾಂತರ್ಗತ ಜಂಗಮರೆಂದು ಹೇಳುವ ಮಾತನ್ನು ಕೇಳಿದರೆ ಯಾರಿಗೆ ತಾನೆ ನಗುಬರಲಿಕ್ಕಿಲ್ಲ? ಸರ್ವಸಂಗ ಪರಿತ್ಯಾಗಮಾಡಿ ಪ್ರಪಂಚವನ್ನೇ ತ್ಯಾಗಮಾಡಿದ ಸನ್ಯಾಸಾಶ್ರಮದವರಿಗೆ ಅಂಥ ಜಂಗಮಾಧಿಕಾರವು ಹ್ಯಾಗೆ ಲಭಿಸುವದು? ಸಂಸಾರಿಗಳಂತೆ ಬೋಳಾಡುವದು ನಿಮ್ಮ ಆಶ್ರಮದ ಧರ್ಮವಲ್ಲ! ನೀವು ಕೈಕೊಂಡಿರುವ ಜಟಮಕ್ಕ ಕಾಷೀನಾಮಯನ್ನು ಕೆಡಿಸಿರಿ, ಅಂದರೆ ನಿಮ್ಮ ಆಟವ ಒಡಗುವದು. ಇದು ಹಾಗಿರಲಿ ನೀವು ಅಷ್ಟಾವರಣಾಂತರ್ಗತ ಜಂಗಮರಾಗಬೇಕಾದರೆ ಅಷ್ಟಾವರಣಕ್ಕೆ ಮೂಲಕಾರಣೀಭೂತನಾದ ಗುರುವನ್ನು ಪೂಜ್ಯಬುದ್ಧಿಯಿಂದ ಸ್ಮರಿಸುವಿರೋ? ಇಲ್ಲವಂದರೆ ಗುರುವನ್ನು ತಿರಸ್ಕರಿಸಿ ಜಂಗಮತ್ವವು ಹೇಗೆ ಸಿದ್ಧಿಯಾಗುವದು? ಜಂಗಮನಾಗಬೇಕಾದರೆ ಗುರುವಿನ ಅಧಿಕಾರವನ್ನು ಪಡೆದಿರುವನಾಗಿರಬೇಕು. ಗುರುವಿನಂತೆ ಜಂಗಮನು ಲಿಂಗಪ್ರತಿಷ್ಠಾ ದೀಕ್ಷಾ ಶಿಕ್ಷಾ ದಂಡನ ಖಂಡನಾದಿಗಳ ಅಧಿಕಾರವುಳ್ಳವನಾಗುತ್ತಾನೆ. ಹೀಗಿದ್ದು ನೀವೇ ಜಂಗಮರೆಂದು ಬರೆಯುವದು ಯೋಗ್ಯಕಾರಣವಲ್ಲವೆಂದು ಸರ್ವರಿಗೂ ಕಂಡುಬರುತ್ತದೆ ವಿರಕ್ತರೇ ನಿಮ್ಮ ಕಡೆಯಿಂದ ಉಪದೇಶ ತೆಗೆದುಕೊಂಡ ಕೆಲ ಜನರ ಗೃಹದಲ್ಲಿ ಅರುಕಲಶಗಳನ್ನು ಹೂಡುವಂತೆ ಏರ್ಪಾಟನ್ನು ಮಾಡಿರುವಿರಂತೆ! ನಿಮ್ಮ ಶಾಖೆಯ ಹೊಸದಾಗಿ ವಾಸಾದಂತೆ ಕಾಣುವದು ನಿಮ್ಮ ರೂಲ್ಸಿಗೆ ವಿರುದ್ಧವಾಗಿ ಕೆಲ ವಿರಕ್ತರು ಹಲ್ಲಿಕೇರಿಯ ಮೇಲೆ ಪಂಚಕಲಶವನ್ನು ಇಟ್ಟುಕೊಳ್ಳವದಿಲ್ಲ ಅದಕ್ಕೆ ಬಹಿಷ್ಕಾರವನ್ನು ಹಾಕುವದಿಲ್ಲವೇ? ಹಾಗೆ ಬಿಟ್ಟರೆ ನೀವು ತೆಗೆದಿರುವ ರೂಲ್ಸಿಗೆ ಅವಮಾನಮಾಡಿದಂತಾಗುವದಿಲ್ಲವೇ? ಲಗ್ನದಲ್ಲಿ ಆರು ಕಲಶಗಳು ಏಕೆ? ಮುಕ್ತ್ಯೈದಿಯರನ್ನು ಅರುಜನರನ್ನು ಮಾಡಿರಿ. ನೀವು ಜನಿಸಿದಾಗ ನಿಮ್ಮ ಪೂರ್ವಜ ಗುರುಸ್ಥಾನದವರು ಪಂಚಸೂತ್ರದ ಲಿಂಗವನ್ನು ಧರಿಸಿರುವರು. ಆ ಲಿಂಗವು ನಿಮ್ಮ ಆರು ಕಲಶಗಳಿಗೆ ಯೋಗ್ಯವೆನಿಸುವದಿಲ್ಲವಾದ್ದರಿಂದ ಆರು ಸೂತ್ರದ ಲಿಂಗವನ್ನು ಧಾರಣಮಾಡಿರಿ ಅಂದರೆ ನೀವು ಕೈಕೊಂಡಿರುವ ರಿವಾಜುಗಳು ಎಲ್ಲವೂ ಪಾಸಾಗುವವು. ಇದನ್ನೆಲ್ಲವನ್ನು ವಿಚಾರಮಾಡಿ ಧರ್ಮಶಾಸ್ತ್ರದಂತೆ ನಡೆದು ಮುಕ್ತಿಭಾಗಿಗಳಾಗಿರಿ ಅಷ್ಟಾವರಣಾಂತರ್ಗತ ಜಂಗಮರು ಗುರುವರ್ಗದ ಚರಮೂರ್ತಿಗಳಿರುತ್ತಾರೆಂದು ದೃಢವಾಗಿ ನಂಬಿರಿ ಕೇವಲ ದಂಭದಿಂದ ಏನೂ ಪ್ರಯೋಜನವಿಲ್ಲ. ನಿಮ್ಮ ಆಶ್ರಮದಂತೆ ನಡೆದು ಗುರುಕೃಪೆಗೆ ಪಾತ್ರರಾಗಿ ಮುಕ್ತಿಭಾಗಿಗಳಾಗಿರಿ

ಪಾರ್ವತೆಪ್ಪ ಮಲಗಾವಿ, ಹಂಪಸಾಗರ.

ಮದ್ರಾಸು ವೀರಶೈವ ವಿದ್ಯಾವರ್ಧಕಸಂಘ, ಬಳ್ಳಾರಿ.

(ಈ ಸಂಘದ ೧ನೆಯ ವ್ಯಾಪಾರದ ಪರಿಣಾಮ)

ಈ ಸಂಘದ ವ್ಯವಸ್ಥಾ ಕಮಿಟಿಯು ಒಂದು ಲಕ್ಷ ರೂ|| ಗಳ ಚೀಟಿಗಳನ್ನು ಮಾರಿ 25 ಸಾವಿರ ರೂಪಾಯಿಗಳನ್ನು ಬಹುಮಾನರೂಪವಾಗಿ ಕೊಡುವದಾಗಿ ಠರಾಯಿಸಿತ್ತು ಆದರೆ ಎಷ್ಟು ವಿಶೇಷಪ್ರಯತ್ನಪಟ್ಟರೂ 12½ ಹನ್ನೆರಡೂವರೆ ಸಾವಿರ ರೂಪಾಯಿಗಳು ಮಾತ್ರ ಸೇರಿರುವದರಿಂದ ಜಯಹೊಂದಿದ ಉಮೇದುವಾರರಿಗೆ ಬಹುಮಾನವನ್ನು ಮಾಡಿನಾಪ್ರಕಾರ ವ್ಯವಸ್ಥಾ ಏರಪಡೆಯ ನಿಯಮಕ್ಕನುಸರಿಸಿ ಬಹುಮಾನದ ಮೊತ್ತಕ್ಕೆ ರೂಪಾಯಿ ಒಂದಕ್ಕೆ ಎರಡು ಆಣೆಯ ಪ್ರಕಾರ ಹಂಚಲ್ಪಡುತ್ತದೆ

ಈ ಕೆಳಗೆ ಬರೆದಿರುವ ದೊಡ್ಡಮನುಷ್ಯರ ಸಮ್ಮುಖದಲ್ಲಿ ವ್ಯವಹಾರಚೀಟಿಗಳು ಈ ತಿಂಗಳು 18 ನೇ ತೇದಿಯ ದಿವಸ ಎತ್ತಲ್ಪಟ್ಟವು

1 ಜೇಮ್ಸ್ ಸಾಹೇಬರು ಬಳ್ಳಾರಿ, ಇಂಪೀರಿಯಲ್ ಬ್ಯಾಂಕ್ ಏಜಂಟರು.
2 ಅಲೀ ಸಾಹೇಬರು ರಿಟೈರ್ಡ್ ಮಿಲಿಟರಿ ಆಫೀಸರು ಬಳ್ಳಾರಿ
3 ಭೂಗಿಶೆಟ್ಟಿ ಒಸಪ್ಪನವರು ರಿಟೈರ್ಡ್ ಡಿಪ್ಯುಟಿ ಕಲೆಕ್ಟರ್, ಬಳ್ಳಾರಿ
4 ಗುಂಡೇರಾಯರು ಬಳ್ಳಾರಿ ಮಾತಿಂಗ್ ಕಂಪನಿ ಪ್ರೊಪ್ರೈಟರು
5 ಟಿ ಹೇದಗಿರಿ ಶ್ರೇಷ್ಠಿಯವರು ಬಳ್ಳಾರಿ, ಇಂಪೀರಿಯಲ್ ಬ್ಯಾಂಕಿನ ಕ್ಯಾಷ್‌ಕೀಪರು
6 ನಾರಂಗಿ ಶ್ರೀನಿವಾಸರಾಯರು ರಿಟೈರ್ಡ್ ಕ್ಯಾಷ್‌ಕೀಪರ್ ಇವರು ವ್ಯವಹಾರ ಚೀಟಿಯನ್ನು ಸಹ ಎತ್ತಿಟ್ಟುಮಾಡಿರುತ್ತಾರೆ

ಜಯಹೊಂದಿದ ಉಮೇದುವಾರರ ಲಿಸ್ಟು ಪ್ರಿಂಟು ಆದನಂತರ ಕಳುಹಿಸಲ್ಪಡುವದು

ತೊಗರಿ ವೀರಪ್ಪ,
ಪ್ರಸಿಡೆಂಟ

ಯದುನೃಪವಿಜಯ.

ಮೈಸೂರು ಅರಸು ಮನೆತನದ [illegible] ರಾಜರ [illegible] ಯದುನೃಪವಿಜಯ ಕನ್ನಡ ಕಾವ್ಯವನ್ನು [illegible] ಈ ಗ್ರಂಥದಲ್ಲಿ [illegible] ಪೂರ್ವಾಪರ [illegible] ರೀತಿಯಾಗಿ ಪ್ರತಿಪಾದಿಸಲ್ಪಟ್ಟಿರುವುದಲ್ಲದೆ ಮೈಸೂರು ರಾಜ್ಯಕ್ಕೆ [illegible] ಸಹಾಯವನ್ನು [illegible] ಪ್ರತಿಯೊಬ್ಬರೂ ಈ ಗ್ರಂಥವನ್ನು ಅವಶ್ಯವಾಗಿ ಸಂಗ್ರಹಿಸಬೇಕಾಗಿದೆ [illegible] ಸಭೆಯವರು ಈ ಗ್ರಂಥವನ್ನು [illegible] (V Form) ಗೆ ಪಠ್ಯಪುಸ್ತಕವನ್ನಾಗಿ [illegible] ಇದರ ಬೆಲೆ [illegible]

ಇದರ ಸಿಕ್ಕುವ ಸ್ಥಳ

[illegible]

[illegible]

[illegible] ಮೈಸೂರು

[illegible]

ಕಂಡುಹಿಡಿದ ಸಿದ್ಧೌಷಧ.

[illegible] ಅಮೇರಿಕಾದಿಂದ [illegible] ಅನೇಕ [illegible] ಪರೀಕ್ಷೆಗಳಿಂದ [illegible]

ಎಲಿಕ್ಸಿರ್ ಆಫ್ ಲೈಫ್

ಅಥವಾ

ಜೀವನಾಧಾರ

[illegible] ಕಂಡುಹಿಡಿದ ಆರೋಗ್ಯಕ್ಕೆ [illegible] ಅನೇಕ ರೋಗಗಳನ್ನು [illegible] ಮೊದಲಾದ [illegible] ಜ್ವರ [illegible] ರೋಗಗಳಿಗೆ [illegible] ಉಪಯೋಗಿಸುವುದರಿಂದ [illegible] ಜೀವನಾಧಾರವೇ

ಸಂಜೀವನೌಷಧ

[illegible] ಪ್ರತಿಯೊಬ್ಬನ [illegible] ಜೀವನಾಧಾರವು [illegible] ಈ ಜೀವನ [illegible] ಬೆಲೆಯು [illegible]

[illegible]

ನಿಮ್ಮ ಕಂಪನಿಯಿಂದ ನಾನು [illegible] ಜೀವನಾಧಾರದ ಬಾಟ್ಲಿಗಳನ್ನು [illegible] ನಾನು ಉಪಯೋಗಿಸುತ್ತಲೂ [illegible] ಅನೇಕ ರೋಗಗಳು [illegible] ಆಸ್ಪತ್ರೆಯ [illegible] ಅನೇಕರಿಗೆ [illegible] ಅನೇಕ ಮಕ್ಕಳುಗಳ [illegible] ನಾಯುಸಂಬಂಧವಾದ [illegible] ಗುಣವಾಗಿದೆ

[illegible]

ಜೀವನಾಧಾರ ಡಿಪೋ, ಹುಬ್ಬಳ್ಳಿ

NEW FORD

THE SIGNS OF THE TIMES

Buy a **FORD** *and Bank the Balance*

EASILY PURCHASED

EASY TO DRIVE

EASY TO RUN

ARRANGED FOR PURCHASE OF ANY MODELS IF DESIRED BY EASY TERMS

GENUINE **FORD** PARTS

FOR SALE HERE

FORD SUB DEALERS,

FOR HASSAN KADUR MYSORE DISTRICTS

For particulars apply to

A. J. RAM & SONS

SAYAJI RAO ROAD, MYSORE.

ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಸರ್ವೋತ್ಕೃಷ್ಟ ಗ್ರಂಥಗಳು

ಶ್ರೀ [illegible] ಸಂಸ್ಥಾನದ [illegible] ವೀರಶೈವ ಸಿದ್ಧಾಂತದ ಸ್ವರೂಪವನ್ನು [illegible] ವೀರಶೈವ ಪಂಡಿತಾಗ್ರಗಣ್ಯರೂ [illegible] ವೀರಶೈವ ಮತಕ್ಕೆ [illegible] ಇಂಥ ಗ್ರಂಥರತ್ನಗಳನ್ನು [illegible] ಸಿದ್ಧಾಂತವನ್ನು [illegible] ಈ ಗ್ರಂಥಗಳನ್ನು ಅವಶ್ಯವಾಗಿ [illegible]

ವೀರಶೈವ ಸಿದ್ಧಾಂತಸುಧಾಕರ	2-0-0
[illegible] ([illegible])	1-8-0
[illegible] ([illegible])	1-0-0

[illegible]

[illegible] ಚಿತ್ರದುರ್ಗ

ಶ್ರೀ ಜಗದ್ಗುರು ಪಂಚಾಚಾರ್ಯ ಪ್ರಣೀತವಾದ

ಸರ್ವೋತ್ತಮವಾದ ಗ್ರಂಥಗಳು

ಶ್ರೀ ಜಗದ್ಗುರು [illegible] ನಾಮಾವಳಿ [illegible]	[illegible]
ಶ್ರೀ ಜಗದ್ಗುರು [illegible] ನಾಮಾವಳಿ [illegible]	[illegible]
ಶ್ರೀ ಜಗದ್ಗುರು [illegible] ನಾಮಾವಳಿ [illegible]	[illegible]
ಶ್ರೀ ಜಗದ್ಗುರು [illegible] ನಾಮಾವಳಿ	[illegible]
ಶ್ರೀ ಜಗದ್ಗುರು [illegible] ನಾಮಾವಳಿ [illegible]	[illegible]
[illegible] ದೀಕ್ಷಾವಿಧಿ	[illegible]
[illegible]	[illegible]
ಗೋತ್ರಸೂತ್ರ [illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]
ಶ್ರೀ [illegible] ಮಂಗಳಸ್ತೋತ್ರಾವಳಿ [illegible]	[illegible]
[illegible]	[illegible]
[illegible]	[illegible]
ಶ್ರೀ [illegible]	[illegible]

[illegible] ಪುಸ್ತಕಗಳನ್ನು [illegible]

ಮ್ಯಾನೇಜರ್

ಪಂಚಾಚಾರ್ಯಪ್ರಭಾ ಆಫೀಸ್,

ಸಯ್ಯಾಜಿರಾವ್ ರೋಡ್ ಮೈಸೂರು

ASIATIC GOVERNMENT SECURITY LIFE ASSURANCE CO., LTD MYSORE

ಏಶಿಯಾಟಿಕ್ ಗವರ್ನಮೆಂಟು ಸೆಕ್ಯುರಿಟಿ ಲೈಫ್ ಅಸ್ಯೂರೆನ್ಸ್ ಕಂಪನಿ, ಮೈಸೂರು

ಮುಖ್ಯ ಕಾರ್ಯಾಲಯ ಬೆಂಗಳೂರು.

ನಮ್ಮ ಸಂಸ್ಥಾನದಲ್ಲಿರತಕ್ಕ ಜೀವವಿಮೆ ಸಂಘಗಳಲ್ಲಿ [illegible]

ಆದ್ದರಿಂದ ಯಾವಾಗಲೂ "ಏಶ್ಯಾಟಿಕ್" [illegible] ನಿಯಲ್ಲಿಯೇ ವಿಮೆಮಾಡಿರಿ

ಏಕೆಂದರೆ ಇದರ ದರಗಳು [illegible] ಮತ್ತು ಇದರ [illegible] (ಸ್ಕೀಮು) [illegible]

ಬಾಂಡುದಾರರಿಗೆ ಬಡ್ಡಿಯಿಲ್ಲದೆ ತಮ್ಮ [illegible] ಮೇಲೆಯೂ, [illegible] ಮೇಲೆಯೂ ಸಾಲವನ್ನು ಕೊಡುತ್ತದೆ

ಬಾಂಡುಗಳ ಚೀಟಿಯನ್ನು ಎತ್ತುವ ಮುಂದಿನ [illegible] 31 ನೆಯ ಜನವರಿ 1928 ಕ್ಕೆ ನಡೆಯುತ್ತದೆ

ವಿಶೇಷ ವಿಷಯಗಳಿಗೆ ಈ ಕೆಳಗೆ ನಮೂದಿಸಿ [illegible]

(1) ಮ|| ಪಿ [illegible] ಚೀಫ್ ಏಜಂಟ್, ಏಶಿಯಾಟಿಕ್ ಬಿಲ್ಡಿಂಗ್ಸ್, ಸಯ್ಯಾಜಿರಾವ್ ರೋಡ್, ಮೈಸೂರು

(2) ಮ|| [illegible] ಚೀಫ್ ಏಜಂಟ್, ಹುಬ್ಬಳ್ಳಿ ಮತ್ತು [illegible]

(3) ಹೈದರಾಬಾದ್ [illegible] ಚೀಫ್ ಏಜಂಟ್, ಹೈದರಾಬಾದ್ ([illegible]

[29]

ಡಾಕ್ಟರ್ ಜೀ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ [illegible] ಕಂಡುಹಿಡಿಯಲ್ಪಟ್ಟು, [illegible] ಇದನ್ನು ಉಪಯೋಗಿಸಿ [illegible] ಯೋಗ್ಯತಾಪತ್ರ [illegible] ಕೊಟ್ಟಿ [illegible] ಪ್ರಸಿದ್ಧ [illegible] ಈ ನಶ್ಯದ [illegible] ಯಿಂದ [illegible] ವ್ಯಾಧಿಗಳು [illegible] ತಲೆಯಲ್ಲಿನ ರೋಗ [illegible] ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗ [illegible] ಮುಂತಾದ ವ್ಯಾಧಿಗಳು ಪರಿಹಾರ [illegible] ಕಂಠಕ್ಕ ಮೇಲ್ಪಟ್ಟ [illegible] ವ್ಯಾಧಿಗಳು [illegible] ಮೂಡುಬಿಟ್ಟ [illegible] ಸಾಧಾರಣ ನಶ್ಯದ [illegible] ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ [illegible] ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ [illegible] ಉಪಯೋಗಿಸುತ್ತಾರೆ [illegible] ಕಳುಹಿಸಲಾದೀತು.

(Registered Trade Mark)

ಡಬ್ಬಿ ಒಂದಕ್ಕೆ ಕ್ರಯ ರೂ ೦-೪-೦ ವಿ. ಪಿ. [illegible]

[illegible] ಒಂದಕ್ಕೆ ಕ್ರಯ ರೂ [illegible] ವಿ. ಪಿ. [illegible]

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ [illegible] ತಿಳಿಯುವಂತೆ ಬರೆಯಿರಿ [illegible]

ಗುರುಬಸವ ಅಂಡ್ ಕಂಪನಿ ಲಿಮಿಟೆಡ್,

[31] [illegible] ಮದರಾಸು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ [illegible] ವೇ|| ಬ್ರಂ|| ಪಂಡಿತ [illegible] ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No M 2266 ಶ್ರೀ ಜಗದ್ಗುರು ಪಂಚಾಚಾರ್ಯರ್ಃ ಪ್ರಸೀದಂತು REGISTERED No. M. 226

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಃ ಪಂಚಾಸ್ಯಪೀಠಾಧಿಪಃ | ಪಂಚಕ್ಲೇಶವಿನಾಶಕಃ ಪರತರಶ್ರೀಪಂಚಲಿಂಗೋದ್ಭವಃ ||
ಪಂಚಾಚಾರನಿಯಾಮಕಃ ಪರಿಲಸತ್ಪಂಚಾಕ್ಷರೀಬೋಧಕಃ | ಪಂಚಾಚಾರ್ಯಜಗದ್ಗುರೂತ್ತಮಪದಃ ಪಾಲಿಪ್ಪರೀಲೋಕವಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ | ಬಿಡಿ ಪ್ರತಿ ೧೩ ಕಾಸು | ಪರಸ್ಥಳದವರಿಗೆ ೨ ರೂ. ೮ ಆ

ಸಂಪುಟ ೧.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೯ನೇ ಜನವರಿ ೧೯೨೮ [ಸಂಚಿಕೆ ೩೫.

OM

Rare opportunity! **Don't miss!!**

LOANS

without interest granted to our Bondholders on personal security

Amount already advanced exceed Rs. 47,000

NEXT DATE FOR DETERMINATION OF LOANS 31-1-1928

For particulars apply with one anna postage at once to

M. RANGASAMI,

Organizing Representative, Mysore & Madras,

389, Bandikere, Mysore.

ಶ್ರೀ ಜಗದ್ಗುರು ಪಂಚಾಚಾರ್ಯರ್ಃ ಪ್ರಸೀದಂತು

ಪ್ರಭಾಪತ್ರಿಕೆಯ ಸೋಟಕನೋ ಕೀಟಕನೋ?

ಸ್ವಾರ್ಥಪತ್ರಿಕೆಯು ಈ ತಿಂಗಳ 7 ನೆಯ ತಾರೀಖಿನ ಸಂಚಿಕೆಯಲ್ಲಿ [illegible] ಶಾಸ್ತ್ರಿಗಳ ಅಳುಬುರುಕತನವು ಎಂಬ ಲೇಖವನ್ನು [illegible] ಪತ್ರಿಕೆಯ ಸೋಟಕ ಎಂಬ ಹೆಸರನ್ನಿಟ್ಟುಕೊಂಡು ಯಾವನೋ ಒಬ್ಬ ಕುಚೋದ್ಯೆಯವನು ಬರೆದಿದ್ದಾನೆ. ಪ್ರಭಾಪತ್ರಿಕೆಯು ಹೊರಡತಕ್ಕಂದಿನಿಂದ ಯಾವತ್ತು ಲೇಖಗಳನ್ನು ಪಂ. ಕಾಶೀನಾಥ[illegible]ಗಳು ಮತ್ತು ಪಂಡಿತ ಗುರುಶಾಂತಶಾಸ್ತ್ರಿಗಳು ಇವರಿಬ್ಬರೇ ಬರೆದು ಪ್ರಸಿದ್ಧಪಡಿಸುವರೆಂದು ಬರೆದಿರುವದನ್ನು ನೋಡಿದರೆ ನಗೆಯು ಬರುವಂತಿದೆ. ಇವರೇ ಲೇಖಗಳನು ಬರೆಯುತ್ತಿರುವದನ್ನು ಯಾವ ಗುಪ್ತಿಸೊಳಗಿನಿಂದ ಬಂದು ನೋಡಿದನೋ [illegible]ದಾಗಿದೆ. ಗುರುಭಕ್ತಕೇಸರಿಯವರ ಹುಟ್ಟಿದ ಗ್ರಾಮವು [illegible] ಜಿಲ್ಲಾ ಹಡಗಲಿ ತಾಲೂಕಿನಲ್ಲಿ ಅದೆಯಂತೆ! ಹುಟ್ಟಿದ ಗ್ರಾಮವು ಬಳ್ಳಾರಿಜಿಲ್ಲಾ ಹಡಗಲಿ ತಾಲೂಕಿನಲ್ಲಿ ಇರುವದೆಂದು ಈ ಲೇಖಕನು ಯಾವ ಕುಂಬಾರನು ಬರೆದ ಭೂಗೋಳದಲ್ಲಿ ಓದಿದನೋ ತಿಳಿಯದಾಗಿದೆ. ಅವರ ಜಿಲ್ಲಾ ಅವರ ತಾಲೂಕು ಗೊ[illegible] ಹೀಗೆ ಮನಸ್ಸಿಗೆ ಬಂದಂತೆ ಬರೆಯುವದು ಕುಚೋದ್ಯೆಯ [illegible]ಲಕ್ಷಣವಲ್ಲ! ಗುರುಭಕ್ತಕೇಸರಿಯವರಿಗೆ ಕುಬುಸ ಮಾರುವವರೆಂದು ಬರೆದಿದ್ದಾನೆ. ಅವರು ಕುಬುಸ ಮಾರುವವರಾದರೆ [illegible] ಕುಬುಸ ಮಾರುವವರಿರಬಹುದು! ಇಂಥ ಅಸಂಬದ್ಧ [illegible]ರೂಪಗಳಾದ ಲೇಖನಗಳಿಂದ ಈ ಲೇಖಕನಿಗೇ ಆಗಲಿ [illegible] ಲೇಖವನ್ನು ಪ್ರಕಟಿಸುವವರಿಗೇ ಆಗಲಿ ಯಾವ ಪ್ರಯೋಜನವು ದೊರೆಯುವದೋ ಏನೋ? ಗುರುಭಕ್ತಕೇಸರಿಯವರು [illegible] ಗ್ರಾಮದಲ್ಲಿದ್ದು ಒಂದೇ ದಿವಸದಲ್ಲಿ ಸ್ವಾರ್ಥಪತ್ರಿಕೆಗೆ [illegible] ಉತ್ತರವನ್ನು ಬರೆದು ಪ್ರಕಟಿಸುವರು? ಎಂದು ಬರೆದಿದ್ದಾನೆ. ಎಲೈ ಲೇಖಕನೇ ಗುರುಭಕ್ತಕೇಸರಿಯವರು ಮಠ[illegible] ಇನ್ನು ಹಿಂದಿಸುವದಕ್ಕಾಗಿ ರಾಜಧಾನಿಯಲ್ಲೇ ಇರುತ್ತಾರೆ. [illegible] ಪ್ರಭಾಪತ್ರಿಕೆಯಲ್ಲಿ ಪ್ರಕಟಿಸಿದ ಲೇಖವನ್ನು ಓದಲಿಲ್ಲವೇನು? ಹಾಗೆ ಅವರ ದರ್ಶನವನ್ನು ಮಾಡಿಕೊಳ್ಳುವ ಇಚ್ಛೆಯಿದ್ದರೆ ರಾಜಧಾನಿಗೆ ಬಂದು ದರ್ಶನವನ್ನು ಮಾಡಿಕೊಳ್ಳಬಹುದು. ನಿನಗೆ ಪ್ರಶ್ನವನ್ನು ನಿರ್ಣಯಿಸುವ ಯೋಗ್ಯತೆಯಿಲ್ಲದಿದ್ದ ಪಕ್ಷದಲ್ಲಿ ಸ್ವಾರ್ಥಪತ್ರಿಕೆಯ ಸಂಪಾದಕರಾದರೂ ಪ್ರತ್ಯಕ್ಷವಾಗಿ ಅವರ ದರ್ಶನ ಸಂಭಾಷಣಾದಿಗಳನ್ನು ಮಾಡಿಕೊಂಡು ಗುರುಭಕ್ತಕೇಸರಿಯವರು ರಾಜಧಾನಿಯಲ್ಲೇ ಇದ್ದಾರೆಂದು ತಮ್ಮ ಪತ್ರಿಕೆಯ ಮೂಲಕ ಇಂಥ ಅಪೂರ್ವಶಿಷ್ಯರಿಗೆಲ್ಲಾ ತಿಳಿಯಪಡಿಸಬಹುದು. ಯಾವದನ್ನೂ ವಿಚಾರಮಾಡದೆ ಮನಸ್ಸಿಗೆ ಬಂದಂತೆ ಬರೆಯುವದೂ ಅದನ್ನು ಪ್ರಸಿದ್ಧಪಡಿಸುವದೂ ಕುಚೋದ್ಯೆಯ ಪ್ರಭಾವವೋ ಸರಿ! ಮುಂದೆ ಈ ಲೇಖಕನು ಪ್ರಭಾಪತ್ರಿಕೆಯ ಸಂಪಾದಕರಿಗೆ ಏನೇನೋ ಬರೆದಿರುತ್ತಾನೆ. ಶ್ರೀಮನ್ಮಹಾರಾಜರವರ ಆಸ್ಥಾನದ ವಿದ್ವಾಂಸರಾದ ಸಂಪಾದಕರಿಗೆ ಇಲ್ಲಸಲ್ಲದ ಸಂಸ್ಕೃತವು ಬರುವದಂತೆ! ಹೀಗೆ ಬರೆಯುವ ಈ ಲಂಡನಿಗೆ ಎಷ್ಟು ಗಹನತರವಾದ ಸಂಸ್ಕೃತವು ಬರುವದೋ ತಿಳಿಯದು. ಆಸ್ಥಾನ ವಿದ್ವಾಂಸರ ವಿಷಯದಲ್ಲಿ ಅಪ್ರಾಸಂಗಿಕವಾಗಿ ಹೀಗೆ ಬರೆದರೆ ಲೋಕರೆಲ್ಲಾ 'ಛೀ' ಎನ್ನುತ್ತಾರೆಂಬ ಭಯವಾದರೂ ಈತನಲ್ಲಿ ಉತ್ಪನ್ನವಾಗಿರಲಿಲ್ಲವೇನು? ಸಾರಸಾರ ವಿಚಾರಶೂನ್ಯರಿಗೆ ಭಯವೆಲ್ಲಿ? ಬುದ್ಧಿಯೆಲ್ಲಿ? ಇರಲಿ. ಗುರುವರ್ಗಾದಿ ಚರವರ್ಗದವರಿಂದ ಸಮಾಜದಲ್ಲಿ ಐಕ್ಯತೆಯು ಹೆಚ್ಚಾಯಿತೋ ಮೊದಲೇ ಹೆಚ್ಚಾಗಿತ್ತೋ? ಎಂದು ಪ್ರಶ್ನೆಮಾಡಿದ್ದಾನೆ. ಚರವರ್ಗದ ಶಿರೋಮಣಿಯೇ ಧರ್ಮಶಾಸ್ತ್ರವಿರುದ್ಧವಾಗಿ ವರ್ತಿಸುವ ವಿರಕ್ತಮಠಸ್ಥರಿಂದಲೂ ಇಂಥವರ ಪಕ್ಷವನ್ನು ಹಿಡಿದು ಬರೆವ [illegible] ಚರವರ್ಗಶಿರೋಮಣಿಗಳಾದ ನಿಮ್ಮಂಥವರಿಂದಲೂ ಈ ಚರವರ್ಗಕ್ಕೆ ಬಹುಕಾಲದಿಂದ ಎಂದಿದೆಯೆಂಬುದನ್ನು ಚೆನ್ನಾಗಿ ತಿಳಿಯಬೇಕು. ಶ್ರೀ ಜಗದ್ಗುರು ಪಂಚಾಚಾರ್ಯಪೀಠದ ಈಗಿನ ಮಹಾಸ್ವಾಮಿಗಳವರು ತಮ್ಮ ತಮ್ಮ ಮಠದಲ್ಲಿ ಇಟ್ಟುಕೊಂಡು ಸರ್ವಾಧಿಕಾರವನ್ನು ಕೊಟ್ಟರೂ ಸುಮ್ಮನಿರುವದು ಯೋಗ್ಯವೋ? ಎಂದು ಪ್ರಶ್ನೆಮಾಡಿದ್ದಾನೆ. ಇದರ ಉತ್ತರವು ಪ್ರಭಾಪತ್ರಿಕೆಯಲ್ಲಿ ಹಿಂದೆಯೇ ಪ್ರಕಟವಾಗಿದೆ. ಭಕ್ತಿಯಿಂದಲೂ ಪಕ್ಷತೆಯಿಂದಲೂ ತ್ರಿಕರಣಪೂರ್ವಕವಾಗಿ ಪೀಠದ ಅಭ್ಯುದಯವನ್ನು ಇಚ್ಛಿಸುತ್ತಿರುವವರು ಬಂಧುಗಳಾದರೇನು? ಮತ್ತೊಬ್ಬರಾದರೇನು? ಕೆಲವರು ತಮ್ಮ ಮಠದಲ್ಲಿ ಹೆಂಡರು ಮಕ್ಕಳಿಂದ ಕೂಡಿದ ತಮ್ಮ ಬಂಧುಬಾಂಧವರನ್ನು ಇಟ್ಟುಕೊಂಡು ಅವರ ಪೋಷಣೆಯಲ್ಲಿ ನಿರತರಾದಂತೆ ಈ ಪೀಠದವರು ಸಂಸಾರದಿಂದ ಕೂಡಿದ ಏಜಂಟರನ್ನು ಇಟ್ಟುಕೊಂಡಿಲ್ಲ. ಹಾಗೆ ಮುಂದೆಯೂ ಇಟ್ಟುಕೊಳ್ಳುವವರಾಗಿಲ್ಲ. ಇಂಗ್ಲಾಂಡ್ ಸ್ಟೇಟ್ ಭಾಷಾಪರಿಚಯವುಳ್ಳ ಅತ್ಯಂತ ಕಾರ್ಯದಕ್ಷರೂ ಪೀಠಾಭಿವೃದ್ಧಿಲೋಲುಪರೂ ಆದ ಈಗಿನ ಏಜಂಟರು ಪೀಠಾಭಿವೃದ್ಧಿಗೋಸ್ಕರ ತಾತ್ಕಾಲಿಕವಾಗಿ ಅಲ್ಲಿ ವಾಸಮಾಡಿರುವರೇ ಹೊರತು ಇನ್ನಾವ ದುರಾಸೆಯಿಂದಲೂ ವಾಸಮಾಡಿರುವದಿಲ್ಲ. ಪೀಠವು ಅಭಿವೃದ್ಧಿಸ್ಥಿತಿಗೆ ಬಂದಮೇಲೆ ಶ್ರೀ ಜಗದ್ಗುರುಗಳು ಇರಬೇಕೆಂದು ಹೇಳಿದರೂ ಇವರು ಇರುವ ಸ್ವಭಾವದವರಲ್ಲ. ಅವರಿಗೇನೂ ದೇವರು ಕಡಿಮೆಮಾಡಿಲ್ಲ. ಇಂಥವರು ಈ ಪೀಠದಲ್ಲಿದ್ದರೆ ಪೀಠವು ಅಭಿವೃದ್ಧಿಸ್ಥಿತಿಗೆ ಬರುವದೆಂಬ ದುರಾಲೋಚನೆಯಿಂದ ಈ ಲೇಖಕನು ಈ ರೀತಿಯಾಗಿ ಬರೆದಿರುವದು ಆತನ ಸಹಜಸ್ವಭಾವವಾಗಿದೆ. ಇನ್ನು ಈಗ ಸಮ್ಯಃ ಪೀಠಾರೋಹಣ ಮಾಡಿರುವ ಜಗದ್ಗುರುಗಳವರು ಭಿನ್ನಗೋತ್ರದವರಂತೆ! ಇವರು ಭಿನ್ನಗೋತ್ರದವರೆಂದು ಈ ಲೇಖಕನ ಮನೆಮುತ್ತೈದೆಯಾದರೂ ತಿಳಿದುಕೊಂಡಿರುವುದೇನು? ಲೇಖಕನೇ ಅವರು ಭಿನ್ನಗೋತ್ರದವರೋ ಸಗೋತ್ರದವರೋ ಎನ್ನುವ ಸಂಶಯವು ನಿನ್ನಲ್ಲಿ ಉತ್ಪನ್ನವಾಗಿದ್ದರೆ ಈ ವಿಷಯಗಳನ್ನೆಲ್ಲಾ ಸಂಪೂರ್ಣವಾಗಿ ಆಲೋಚಿಸಿ ಸಗೋತ್ರದವರೆಂದೂ ಮಹಾಪಂಡಿತರೆಂದೂ ನಿರ್ಣಯಿಸಿ ಪಟ್ಟಕಟ್ಟಿದ ಮೈಸೂರು ಗವರ್ನಮೆಂಟಿನವರನ್ನು ವಿಚಾರಿಸು. ಆಗ್ಯೆ ನಿನ್ನ ಸಂಶಯಗಳೆಲ್ಲಾ ದೂರವಾಗುವವು. ಇನ್ನು ಸಮಾಜಸೇವೆಯಲ್ಲಿ ಅಧಃಪತನವನ್ನು ಕಳೆದ ಸ್ವಾರ್ಥಪತ್ರಿಕೆಯನ್ನು ತಿಂಪಕಹಿದೆಂದು ಕರಾವು ಮಾಡಿರುವದು ಉಚಿತವೇ?' ಎಂದು ಈ ಲೇಖಕನು ಪ್ರಶ್ನೆಮಾಡಿರುವನು. ಈ ಪತ್ರಿಕೆಯು ಕೈ|| ವೈ|| ವೀರಸಂಗಪ್ಪನವರ ಸಂಪಾದಕತ್ವದಲ್ಲಿ ಇದ್ದಾಗ್ಯೆ ಸಮಾಜಸೇವೆಯನ್ನು ಮಾಡುವದೆಂದು ಸರ್ವರೂ ಒಪ್ಪುತ್ತಾರೆ. ಮ|| ರಾ|| ವಿರೂಪಾಕ್ಷಪ್ಪನವರ ಸಂಪಾದಕತ್ವದಲ್ಲಿ ಅದರಲ್ಲಿ ಈಗ್ಯೆ ನಾಲ್ಕಾರು ವರ್ಷಗಳಿಂದ ಈ ಸ್ವಾರ್ಥಪತ್ರಿಕೆಯು ಸಮಾಜಸೇವೆ ಮಾಡುವದರ ಬದಲು ಸಮಾಜದಲ್ಲಿ ದ್ವೇಷವೆಂಬ ಬೆಂಕಿಯನ್ನು ಹಚ್ಚಿ ಅದಕ್ಕೆ ಮೇಲಿಂದಮೇಲೆ ಸಮಾಜಘಾತಕಗಳಾದ ದುರ್ಲೇಖಗಳೆಂಬ ಉರುವಲಗಳನ್ನು ಹಾಕಿ ಮತ್ತಷ್ಟು ಪ್ರಜ್ವಲಗೊಳಿಸುತ್ತಿರುವ ವಿಷಯವು ಸರ್ವರಿಗೂ ತಿಳಿದದ್ದೇ ಆಗಿದೆ. ಇಂಥ ಪತ್ರಿಕೆಯನ್ನು ಗಿಸಕೆಯಿಂದೆಂದು ಕರಾವು ಮಾಡಿದ್ದು ನ್ಯಾಯವೋ ಅನ್ಯಾಯವೋ? ಎನ್ನುವದನ್ನು ನೀನೇ ವಿಚಾರಿಸು. ಮಠಗಳಿಗೆ ಮುದ್ರಿಸುವರಿಗೆ ಶ್ರೀ ಜಗದ್ಗುರು ಪೀಠದವರು ಬರಕೊಂಡ ಪತ್ರಗಳು ಕಲ್ಪನಾಕೃತಗಳೆಂದೂ ಅವು ನಂಬತಕ್ಕವುಗಳಲ್ಲವೆಂದೂ ಮ|| ರಾ|| ಗುರುಭಕ್ತಕೇಸರಿಯವರು ಸರ್ಕಾರಿ ರಿಪೋರ್ಟು ನೋಡಿ ಅನೇಕ ದಾಖಲೆಗಳನ್ನು ಕೊಟ್ಟು ಹೋದ ತಿಂಗಳ ೧೬ನೆಯ ತಾರೀಖಿನ ಸಂಚಿಕೆಯಲ್ಲಿ ಪ್ರಕಟಿಸಿರುವದನ್ನು ಶುದ್ಧಮನಸ್ಸಿನಿಂದ ನೋಡು. ಅಂದರೆ ನಿಜವಾದ ಸಂಗತಿಯು ನಿನಗೆ ಸ್ಪಷ್ಟವಾಗುವದು. ಇವು ಖೋಟಾಪತ್ರಗಳಾಗಿದ್ದರೆ ಫಿರ್ಯಾದಿಯನ್ನು ಯಾಕೆ ಮಾಡಲಿಲ್ಲ? ಎಂದು ಈ ಲೇಖಕನು ಬರೆದಿರುವನು. ಭಗವಂತನ ಇಚ್ಛೆಯು ಹಾಗಿದ್ದರೆ ಆ ಕಾಲವೂ ಕೂಡ ಏಕೆ ಒದಗಬಾರದು? ಈ ಲೇಖಕನು ತನ್ನ ಲೇಖದ ಅಂತ್ಯದಲ್ಲಿ ಯಾರು ಯಾವ ಕಪಟದಿಂದ ಕಚೇರಿಯ ಸ್ನೇಹಸ್ವೀಕಾರದೀಕ್ಷೆಯನ್ನು ಮುಂದೆ ತಾನೇ ತಿಳಿಯುತ್ತದೆ ಎಂದು ಬರೆದಿರುವನು. ಗುರುವರ್ಗ ವಿರಕ್ತವರ್ಗದಲ್ಲಿ ಉತ್ಪನ್ನವಾಗಿರುವ ಕಲಹವನ್ನು ಸಮಾಜದಲ್ಲಿ ಶಾಂತಿಗೊಳಿಸುವ ವ್ಯವಸ್ಥೆಯನ್ನು ಯಾರೂ ಮಾಡಲಿಲ್ಲವು. ಪ್ರಾಚೀನ ಗ್ರಂಥಗಳ ಮೂಲಕವಾಗಿಯೂ ಅತ್ಯಂತ ಪ್ರಾಚೀನ ಶಿಲಾಶಾಸನಗಳ ಮೂಲಕವಾಗಿಯೂ ಸರಕಾರದವರೇ ಈ ವಿವಾದವನ್ನು ನಿರ್ಣಯಮಾಡಿದಲ್ಲಿ ಸಮಾಜದಲ್ಲಿ ಯೋಗ್ಯವ್ಯವಸ್ಥೆಯಾಗುವದು. ಈ ಲೇಖಕನು ಅಷ್ಟು ಸಮರ್ಥನಾಗಿದ್ದರೆ ಅವಶ್ಯವಾಗಿ ಈ ಕಾರ್ಯವನ್ನು ಕೈಕೊಂಡೇ ತೀರಬೇಕೆಂದೂ ಇದರಿಂದ ಸಮಾಜದಲ್ಲಿ ಶಾಂತಿಯನ್ನು ನೆಲೆಗೊಳಿಸಿ ಸಮಾಜಕ್ಕೆ ಮಹೋಪಕಾರವಾಗಬೇಕೆಂದೂ ಬಹು ಕಳಕಳಿಯಿಂದ ಹೇಳಿಕೊಳ್ಳುತ್ತೇನೆ.

ಪ್ರಭಾಪತ್ರಿಕೆಯ ಸೋಟಕನ

ಹಿತಚಿಂತಕ

ತುಮಕೂರು ಒಂದನೆ ಮುನ್ಸಿಫ್‌ರವರ ಕೋರ್ಟು.

1926-27 ನೇ ಅಸಲ್ ನಂ. 406

ವಾದಿ—	ಪ್ರತಿವಾದಿ—
ಜಿ. ಕೆ. ಗುರುಸಂಗಾರ್‍ಯ, ತಂದೆ ಮಿ|| ಜಿ. ಕೊಟ್ರಪ್ಪ ರಯ್ಯ, 38 ವರ್ಷ, ವೀರಶೈವ ವಕೀಲ, ತುಮಕೂರು.	ಹೀಜ್ ಹೋಲಿನೆಸ್ ಶ್ರೀಮನ್ನಿ ರಂಭಾಪುರಿ ಜಗದ್ಗುರು ರೇವಣಸಿದ್ಧೇಶ್ವರ ಮರುಳಾರಾಧ್ಯರೇಣುಕ ರಾಜೇಂದ್ರ ಸ್ವಾಮಿ, 50 ವರ್ಷ, ಮಠದ ಗುರುಗಳು, ಚಿತ್ರದುರ್ಗ ಜಿಲ್ಲೆ, ಗುರು, ವೀರಶೈವ. ಜನರಲ್ ಪವರ್ ಏಜೆಂಟ್ ಮಿ|| ಲಿಂಗಪ್ಪನ ಮಾಲಿಕ, 72 ವರ್ಷ, ವೀರಶೈವ, ಹಾಲಿ ಬಡಕಾರೆ ಮೊಕ್ಕಾಂ.

ವಾದಿಯ ದಾವಾ

1. ವಾದಿಯು ವೀರಶೈವ ಜನಾಂಗಕ್ಕೆ ಸೇರಿದ್ದಾನೆ. ಪ್ರತಿವಾದಿಯು ಸನ್ಯಾಸಿ ಗುರುವಾಗಿ ಬಡಕ್ಕಣಗಾದಲ್ಲಿ ಮಠಗಾಸಮಯಕ್ಕೆ ಒಬ್ಬ ಧಾರ್ಮಿಕ ಮತ್ತು ಗುರುವಾಗಿರುತ್ತಾರೆ. ಚಿತ್ರದುರ್ಗದಲ್ಲಿ ಮಠದಲ್ಲಿ ವರಾ ತಮ್ಮ ವಾಕ್ಯಗಳನ್ನು ಏಜೆಂಟ್ ಲಿಂಗಪ್ಪನಿಗ ಜನರಲ್ ಪಾವರ್ ಕೊಟ್ಟು ಆ ಮೂಲಕ ಕಾರ್ಯ ನಡೆಸುತ್ತಾ ಇದ್ದಾರೆ.

2. ವಾದಿಗೆ ಪ್ರತಿವಾದಿಯು ಮಠದ ಜವಾಬ್ದಾರಿಗಳು ಚನ್ನಾಗಿ ತಿಳಿದಿರುವವಲ್ಲದೆ ಅವರ ಹಕ್ಕು ಮತ್ತು ಅಧಿಕಾರಕ್ಕೆ ಸಂಬಂಧಪಟ್ಟ ವಿಷಯಗಳು ವಾದಿಗೆ ವಿಶೇಷ ಅನುಭವವಿರುತ್ತೆ.

3. ಕೊಡಗಳಲ್ಲಿರುವ ಅಪ್ಪ ಬಡಕ್ಕಣಗಾದ ಒಂದು ಮಠದ ವಿಚಾರದಲ್ಲಿ ಪ್ರತಿವಾದಿಯು ತನಗೆ ಇದ್ದ ಹಕ್ಕುಗಳ ವಿಚಾರದಲ್ಲಿ 1924ರಲ್ಲಿ ಒಂದು ಸಿವಿಲ್ ಕೋರ್ಟ್ ವ್ಯಾಜ್ಯ ನಡಿಸಬೇಕಾಯಿತು. ಅದೇ ಮಠದಲ್ಲಿ ಪ್ರತಿವಾದಿಯು ವೀರಶೈವರ ಮುಖ್ಯ ಬಗ್ಗೆ ರುವಾದ ಬಾಳೇಹೊನ್ನೂರು ಮಠದ ಪೀಠಾಧಿಕಾರಕ್ಕೆ ಸಂಬಂಧಪಟ್ಟ ವಿವಾದದಲ್ಲಿ ಪ್ರವೇಶಮಾಡಿದರು.

4. ಈ ಉಭಯವಿವಾದಗಳಲ್ಲಿ ಪ್ರತಿವಾದಿಗೆ ಸಲಹೆ ಕೊಡುವದಕ್ಕೂ ಕಾಗದ ಪತ್ರ ನಡಿಸುವದಕ್ಕೂ ವಾದಿಯು ಸಮರ್ಥನೆಂದು ಪ್ರತಿವಾದಿಯು ಕಂಡುಕೊಂಡು, ಈ ವಿವಾದಗಳಲ್ಲಿ ತನ್ನ ಸ್ವಂತ ಏಜೆಂಟಾಗಿ ಕೆಲಸ ಮಾಡಬೇಕೆಂದು ವಾದಿಯನ್ನು ಕೇಳಿಕೊಂಡರು. ಮತ್ತು 1924 ನೇ ಮೇ ಮಾಹೆಯಲ್ಲಿ ಮತ್ತು 1925 ನೇ ಡಿಸೆಂಬರ್ ಮಾಹೆಯಲ್ಲಿ ಈ ಬಗ್ಗೆ ಬರೆದಿರುವ ಕಾಗದದಲ್ಲಿ ತನಗೆ ಇರುವ ಸಮರ್ಥನೆಂದು ಒಪ್ಪಿದ. ವಿವಾದಗಳು ಇಲ್ಲಿಯ ವರೆಗೆ ನಡೆಸಿದ ಎಲ್ಲಾ ಕಾರ್ಯಗಳಿಗೂ, ಮತ್ತು ಒಪ್ಪಿದಂತೆ ವ್ಯಾಜ್ಯದಲ್ಲಿ 4-10-25 ರ ತರುವಾಯ ಮುಂದೆ ನಡೆಸುವ ಕೋರ್ಟಿನಲ್ಲಿ ದಾವೆಯಾಗಿ ಪ್ರತಿವಾದಿಗೆ ಸರಿಯಾದ ಸ್ಟೇಟ್‌ಮೆಂಟ್ ತಯಾರಿಸಿ, ವಾದಿಯು ಪಡಕ್ಕೆ ಬಗ್ಗೆ ಸವ 1300 ರೂಪಾಯಿಗಳನ್ನು ಕೊಡಲು ಬಾಗ್ದಾನ ಮಾಡಿದರು. ಪ್ರತಿವಾದಿಯು ವಾದಿಗೆ 3-10-25 ರಲ್ಲಿ ಕಳುಹಿಸಿದ ಕಾಗದ ಪ್ರಕಾರ ಪ್ರತಿವಾದಿಯ (ಜನರಲ್ ಪವರ್) ಪ್ರಕಾರ ಪ್ರತಿವಾದಿಯ ಏಜೆಂಟ್ ಲಿಂಗಪ್ಪನು ವಾದಿಗೆ 4-10-25 ರಲ್ಲಿ ತುಮಕೂರಲ್ಲಿ ಬರೆದುಕೊಟ್ಟಿರುವ ಕಾಗದದಲ್ಲಿ ಈ ವಾಗ್ದಾನವು ದೃಢಪಡಿಸಲ್ಪಟ್ಟಿ ರುವುದು ಗೊತ್ತಾಗುತ್ತದೆ. ವಾದಿಯು ಸದರಿ ಕಾಗದವನ್ನು ಇತರ ಪತ್ರಗಳ ಸಹಾ ದಾವೆ ಜೊತೆ ಇದರೊಡನೆ ಹಾಜರು ಪಡಿಸಿದ್ದಾನೆ.

5. ಪ್ರತಿವಾದಿಯು ವಾಗ್ದಾನವನ್ನು ವಾದಿಯು ಒಪ್ಪಿಕೊಂಡು ತನ್ನ ಜಾಗ ಸಂಬಂಧದಲ್ಲಿ ಪ್ರತಿವಾದಿಯ ಸ್ವಂತ ಏಜೆಂಟಾಗಿ ನಿಂತು ತನ್ನ ಉದ್ಯೋಗದಲ್ಲಿ ಉಂಟಾದ ನಷ್ಟಗಳನ್ನು ಗಣನೆಮಾಡದೆ ಒಪ್ಪಂದದ ಪ್ರಕಾರ ಪ್ರತಿವಾದಿಯ ಪರವಾಗಿ ಪೂರ್ಣವಾಗಿ ಕೆಲಸಮಾಡಿದ್ದರಲ್ಲಿ ಒಪ್ಪಂದದ ಷರತ್ತುಗಳು ಪ್ರತಿವಾದಿಗೆ ಅನುಕೂಲವಾಗಿಯೂ ಒಡಂಬಟ್ಟಿಗೆ ಬಾಧಕವಾಗಿಯೂ ನಡಿಸಲ್ಪಟ್ಟವು. ವಾದಿಯು ಪ್ರತಿವಾದಿಯ ಮತ್ತು ಅವರ ಮಠದ ಪರವಾಗಿ ಕೆಲಸಮಾಡಿದ್ದರಲ್ಲಿ ಉಂಟಾದ ಅನುಕೂಲ್ಯವಾದ ಫಲಗಳಿಂದ ಸಂತೋಷಪಟ್ಟ ಪರಾಗಿ ಪ್ರತಿವಾದಿಯು ವಾದಿಗೆ ಅನೇಕ ಸಂತೋಷದ ಕಾಗದಗಳನ್ನು ಬರೆದಿರುತ್ತಾರೆ.

6. ಆದರೆ ಪ್ರತಿವಾದಿಯು ಬಾಕಿ ವಾಗ್ದಾನದ ಹಣವನ್ನು ಕೊಡಬೇಕಾಗಿದ್ದಲ್ಲಿ ಮತ್ತೆ 1926 ನೇ ಜನವರಿ ಮಾಹೆಯಲ್ಲಿ 300 ರೂಪಾಯಿಗಳನ್ನು ಮಾತ್ರ ಕೊಟ್ಟಿರುತ್ತಾರೆ. ಬಾಕಿಯನ್ನು ವಾದಿಯು ಅನೇಕ ಸಾರಿ ಕೇಳಿದರೂ ಕೊಡಲಿಲ್ಲ. ಬಾಕಿ ರೂ 1212-10-0 ನ್ನು ಪ್ರತಿವಾದಿಯಿಂದ ಬರಬೇಕಾಗಿರುತ್ತೆ. 4-10-25 ರಲ್ಲಿ ಬರೆದುಕೊಟ್ಟ ಕಾಗದದ ಪ್ರಕಾರ 1 ತಿಂಗಳಲ್ಲಿ ಹಣವನ್ನು ಕೊಡುವ ಪ್ರತಿವಾದಿಯು ವಾದಿಗೆ ಬಡ್ಡಿ ಕೊಡಬೇಕು. 1 ರೂಪಾಯಿ ಬಡ್ಡಿ ದರದಲ್ಲಿ ಪ್ರತಿವಾದಿಯಿಂದ ಬರಬೇಕಾದ ಒಟ್ಟು 1212-10-0 ಸ್ಥಿರೀತ

7. ವಾದಿಗೆ ವ್ಯಾಜ್ಯ ಕಾರಣ ... ಈ ದಾವಾ ತರಬೇಕಾಯಿತು.

8. ದಾವಾಬೆಲೆ 1212-10-0

9. ನ್ಯಾಯಾಧಿಕಾರ—ಪ್ರತಿವಾದಿಯು ... ಕಾಗದ ಬರೆದುಕೊಟ್ಟಿರುವ ಸ್ಥಳ ... ಯಾಗಬೇಕಾಗಿರುವ ... 10-24 ... 13-8-24 ಮತ್ತು 4-10-25 ರ ...

10. ವಾದಿಯ ಬಡ್ಡಿ ಸಹಿತ

11. ಅಸಲು	1300-0-0
ಬಡ್ಡಿ $4\frac{10}{25}$ ರ $24\frac{9}{26}$ ಗೆ	151-10-0
	1451-10-0
ಸಮೇತ $24\frac{9}{26}$ ರಲ್ಲಿ ಜಮಾಪಡಿಸಿದ ಒಂದು ಅಸಲು ಬಡ್ಡಿಗೆ ಜಮಾಮಾಡಿರುವದು	300-0-0
ಬಾಕಿ	1151-10-0
$25\frac{9}{26}$ ರ $14\frac{2}{27}$ ಗೆ ಬಡ್ಡಿ	53-12-0
ನೋಟೀಸ್ ತಂತೀ ಖರ್ಚು	7-4-0
ಒಟ್ಟು	1212-10-0

ಈ ಹಣಕ್ಕೆ (1212-10-0) ಬಾಕಿ ಬಡ್ಡಿ ಕೋರ್ಟ್ ಖರ್ಚು, ಇತರೆ ಮತ್ತು ಒಟ್ಟು ಪ್ರಕಾರ ವಾದಿಯು ಅರ್ಜಿಮಾಡಿ ಕೋರ್ಟಿನವರಿಗೆ ಮುಕ್ತಕೊಳ್ಳುವ ಇತರ ಎಲ್ಲಾ ಪರಿಹಾರಗಳನ್ನು ಸಹ ಪ್ರತಿವಾದಿಯಿಂದ ವಾದಿಗೆ ಸಲ್ಲುವಂತೆ ಡಿಕ್ರಿ ಆಗಬೇಕೆಂದು ವಾದಿಯು ಪ್ರಾರ್ಥಿಸಿ.

ವಾದಿಯ ಪ್ರತಿಮಿನಿಸರಿ ರಿಪ್ಲೈ.

1. ವಾದಿಯು ಈ ಮುಂದಿನ ಪ್ರಶ್ನೆಗಳಿಗೆ ಉತ್ತರ ಅವಶ್ಯವಾದ ಈ ಕೆಳಗಿನ ವಿಷಯಗಳನ್ನು ಪ್ರತಿವಾದಿಯು ತಿಳಿಸಬೇಕು.

(ಅ) ದಾವಾ 3 ನೇ ಪ್ಯಾರಾದಲ್ಲಿ ನಮೂದಿಸಿರುವ ಬಾಳೆಹೊನ್ನೂರು ಪೀಠಾಧಿಕಾರದ ವಿಚಾರದಲ್ಲಿ ಪ್ರತಿವಾದಿಗೆ ಯಾವತರ ಸಂಬಂಧವಿತ್ತು ?

(ಬ) ಮತ್ತು ಆ ವಿವಾದದಲ್ಲಿ ವಾದಿಯು ಪ್ರತಿವಾದಿಯ ಅಪೇಕ್ಷೆಯಂತೆ ಅವರ ಸಲಹೆ ಪ್ರಕಾರ ಅವರ ಪರವಾಗಿ ಕೆಲಸಮಾಡಿದರೇ ?

2. ದಾವಾ 3 ನೇ ಪ್ಯಾರಾದಲ್ಲಿ ಯಾವ ಮಠದ ಹೆಸರನ್ನು ಸೂಚಿಸಿ ಕೊಡಬೇಕು.

3. ದಾವಾ 1 ನೇ ಪ್ಯಾರಾದಲ್ಲಿ ನಮೂದಿಸಿರುವಂತೆ ಪ್ರತಿವಾದಿಯು ವೀರಶೈವರ ಗುರು ಹೇಗೆ ? ಮತ್ತು ಹಾಗೆ ವೀರಶೈವರಾದರೆ ಯಾವ ಸಮುಚ್ಚಕ್ಕೆ ಸೇರಿದವರು ?

4. ಸ್ಟೇಟ್‌ಮೆಂಟ್ 3 ನೇ ಪ್ಯಾರಾದಲ್ಲಿ ನಮೂದಿಸಿದ ಪಂಚಪೀಠಗಳ ಅಥವಾ ಎಲ್ಲಾ ಪೀಠಗಳ ಹೆಸರುಗಳ್ಯಾವುವು ? ಮತ್ತು ಸಿಂಹಾಸನಗಳನ್ನು ಸ್ಥಾಪನೆ ಮಾಡಿದವರಾರು ?

5. ಹಣವನ್ನು ವಾದಿಯು ಕೇಳಲು ಪ್ರತಿವಾದಿಯು ಇಲ್ಲವೆಂದು ಹೇಳಿದ್ದು ಯಾವಾಗ ?

6. ವಾದಿಗೆ 300 ಕೊಟ್ಟದ್ದು ಯಾವಾಗ ಮತ್ತು ದಾವಾದಲ್ಲಿ ನಮೂದಿಸಿದ ಜಮಾಕೊಟ್ಟಿರತಕ್ಕದ್ದೇ ಹೇಗೆ ?

7. ಜನರಲ್ ಪವರ್ ಹಾಜರ್ಮಾಡಬೇಕು.

ಪ್ರತಿವಾದಿಯ ಉತ್ತರ.

1. ... ದಾವಾ 3 ನೇ ಪ್ಯಾರಾದಲ್ಲಿ ಪ್ರತಿವಾದಿಯು ಪೀಠಾಧಿಕಾರದ ವಿಚಾರದಲ್ಲಿ ಪ್ರವೇಶಿಸಿದರೆಂದು ಬರೆಯಲ್ಪಟ್ಟಲ್ಲಿ ಪ್ರತಿವಾದಿಗೆ ಏನು ಸಂಬಂಧವಿತ್ತೆಂದು ನಮೂದಿಸಿದೆ. ಇದರಿಂದ ಪೀಠಾಧಿಕಾರದ ವಿಚಾರದಲ್ಲಿ ಪ್ರತಿವಾದಿಗೆ ಯಾವಾಗ ಸಂಬಂಧ ಉಂಟೆಂದು ಅರ್ಥವಾಗುತ್ತೆ. ಪ್ರತಿವಾದಿಗೆ ಈ ವಿಚಾರದಲ್ಲಿ ಯಾವ ಸಂಬಂಧವೂ ಇರಲಿಲ್ಲ. ಪ್ರತಿವಾದಿಯು ಅನೇಕ ಗೌರವಸ್ಥರು ಮತ್ತು ಮುಖಂಡರಾದ ಶಿಷ್ಯರು ಪೀಠಾಧಿಕಾರದ ಜನಾಂಗವಣೆಯು ಸರ್ಕಾರದವರು ಅಪೇಕ್ಷಿಸಿದಂತೆ ಬಾಳೆಹೊನ್ನೂರಲ್ಲಿ ನಡೆಯದೆ ಒಂದು ಕೈಲಿ ಬಾಗಾದಲ್ಲಿ ನಡೆಯಬೇಕೆಂದು ಅಪೇಕ್ಷೆ ಪಟ್ಟರು. ಮತ್ತು ಸರ್ಕಾರದವರಲ್ಲಿ ರಾಯಭಾರ ಹೋಗಲು ಇಷ್ಟಪಟ್ಟರು. ಇದರಲ್ಲಿ ವಾದಿಯು ಸೇರಿದ್ದರು. ಈ ಬಗ್ಗೆ ಲಿಂಗಾಯಿತ ಸಮಾಜದ ಪರವಾಗಿ ಪ್ರತಿವಾದಿಯ ಸಲಹೆಯನ್ನು ಕೇಳಿದರು ಮತ್ತು ವಾದಿಯು ಒಂದು ಕಾಗದವನ್ನು ಬರೆದಿದ್ದಾರೆ. ಕೇಳಿದಾಗ ಸಲಹೆ ಕೊಡುತ್ತಿದ್ದದ್ದೇ ವಿನಃ ಪ್ರತಿವಾದಿಯು ಈ ವಾದದಲ್ಲಿ ಪ್ರವೇಶಮಾಡಲಿಲ್ಲ ಮತ್ತು ವಾದಿಯನ್ನು ಗೊತ್ತುಮಾಡಿ ಪ್ರತಿಫಲ ಕೊಡಲು ಒಪ್ಪಲಿಲ್ಲ. ಯಾವ ಒಪ್ಪಂದವೂ ಇಲ್ಲ

2. ಬಾಳೆಹೊನ್ನೂರು ಮಠದ ಸ್ವಾಮಿಯು ವೀರಶೈವರ ಮುಖ್ಯ ಜಗದ್ಗುರುವೆನ್ನುವದನ್ನು ತೂಗಿದು ಹಾಕಲು ಪ್ರತಿವಾದಿಯು ಅಪೇಕ್ಷಿಸುತ್ತಾನೆ.

1-4 ನೇ ಪ್ಯಾರಾ ಸಂಗತಿಗಳು ಈ ದಾವಾಕ್ಕೆ ಅನಾವಶ್ಯವಾಗಿವೆ. ವಾದಿಯು ಏನೋ ಉದ್ದೇಶ್ಯದಿಂದ ಪ್ರತಿವಾದಿಯ ಒಪ್ಪಿಗೆ ತೆಗೆಯುವ ಇದನ್ನು ಕಳಿಸುತ್ತಾನೆ ಇದನ್ನು ತಿಳಿಸಬೇಕಾಗಿಲ್ಲವೆಂದು ಅರ್ಥಮಾಡಬೇಕು.

5. ವಾದಿಯು 1925 ನೇ ಮಾರ್ಚ್ ಮಹಾರಾಜ ಲಿಂಗಾಯಿತ ಶಾಲು ಕೇಳಿದ್ದನು. ಪ್ರತಿವಾದಿಯು 24-10-26 ರ ಕಾಗದದಲ್ಲಿ 300 ಗೆ ಹೆಚ್ಚಿಗೆ ಕೊಡುವ ದಿಲ್ಲವೆಂದು ಹೇಳಿದ್ದಾನೆ. 300 ಕೊಟ್ಟ ತಾರೀಖು ದಾವಾದಲ್ಲೇ ನಮೂದಿಸಿದೆ. 300 ರೂ. ಮಾತ್ರ ಕೊಟ್ಟಿದೆ ಜಾಸ್ತಿ ಕೊಟ್ಟಿಲ್ಲ.

6. ಜನರಲ್ ಪವರ್ ಹಾಜರ್ಮಾಡಿದೆ

ತುಮಕೂರು ೧ ನೇ ಮುನ್ಸೀಫ್ ಕೋರ್ಟು

20—27 O. S. No. 406.

ವಾದಿ	ಪ್ರತಿವಾದಿ
ಜಿ ಕೆ ಗುರುಸಂಗಾರ್‍ಯ	ಶ್ರೀಮರುಳಾರಾಧ್ಯರಾಜೇಂದ್ರಸ್ವಾಮಿ

ಪ್ರತಿವಾದಿಯ ಸ್ಟೇಟ್‌ಮೆಂಟ್.

1. ಪ್ರತಿವಾದಿಗೆ ಸಮಾಜದಲ್ಲಿ ಅಗೌರವವನ್ನುಂಟುಮಾಡಬೇಕೆಂಬ ದುರುದ್ದೇಶದಿಂದ ವಾದಿಯು ದಾವೆ 1 ನೇ ಪ್ಯಾರಾದಲ್ಲಿ ಪ್ರತಿವಾದಿಯ ಹೆಸರನ್ನು ತಪ್ಪಾಗಿ ಬರೆದಿದ್ದಾನೆ. ಮರುಳಸಿದ್ಧನು ಎಂಬ ಹೆಸರಿನ ಸಂಗಡನೇ (ಜಂಗಮ) ಇಲ್ಲ. ಪ್ರತಿವಾದಿಯು ಧಾರ್ಮಿಕ ಗುರುಗಳಲ್ಲಿ ಒಬ್ಬರೆಂಬುದು ಸುಳ್ಳು. ಪ್ರಪಂಚದಲ್ಲಿರುವ ಎಲ್ಲಾ ಲಿಂಗಾಯಿತ ಮಠಗಳಿಗೂ ಪ್ರತಿವಾದಿಯೇ ಮುಖ್ಯ ಧಾರ್ಮಿಕ ಗುರು ಆಗಿರುತ್ತಾರೆ. ಪ್ರತಿವಾದಿಗೆ ಸಾಂಪ್ರದಾಯವಾಗಿ ಬಂದಿರುವ ನ್ಯಾಯವಾದ ಹೆಸರನ್ನು ವಾದಿಯು ದಾವೆಯಲ್ಲಿ ಬರೆಯಬೇಕಾಗಿರುತ್ತಾನೆ. ಆದಕಾರಣ ಪ್ರತಿವಾದಿಯ ಹೆಸರನ್ನು "ಹೀಜ್ ಹೋಲಿನೆಸ್ ಶ್ರೀಮದ್ ಮಹಾರಾಜಾ ನಿರಂಜನ ಜಗದ್ಗುರು ಜಯದೇವ ಮರುಳಾರಾಧ್ಯರಾಜೇಂದ್ರ ಮಹಾಸ್ವಾಮಿಗಳವರು" ಎಂದು ದಾವೆಯಲ್ಲಿ ಸೂಚಿಸುವಂತೆ ಕೋರ್ಟಿನವರು ಆರ್ಡರ್ ಮಾಡತಕ್ಕದ್ದು.

2. ವಾದಿಯು ಪ್ರತಿವಾದಿಯ ಶಿಷ್ಯನೇ ಹೇಗೆ ಎಂಬುದನ್ನು ಹೇಳದೆ ಮರೆಮಾಚಿರುತ್ತಾನೆ. ಆದರೆ ವಾದಿಯು ಪ್ರತಿವಾದಿ ಮಠದ ಶಿಷ್ಯನಾಗಿರುತ್ತಾನಾಗಿ ಪ್ರತಿವಾದಿಯ ಬಿರುದುಗಳನ್ನು ಸರಿಯಾಗಿ ಬರೆಯಲು ಬದ್ಧನಾಗಿರುತ್ತಾನೆ.

3. ಪ್ರತಿವಾದಿಯು ಲಿಂಗಾಯಿತ ಮಠಗಳ ಎಲ್ಲಾ ಪೀಠಗಳಿಗೂ ಮುಖ್ಯವಾದ ಮತ್ತು ಪಂಚಪೀಠಗಳಿಗೆ

ಒಂದಾಗಿ ಮುಖ್ಯ ಪೀಠವಾಗಿರುವ ನಿರಂಜನ ಜಗದ್ಗುರುಪೀಠ ಎಂಬ ಮುಖ್ಯಪೀಠದ ಯಜಮಾನನಾಗಿದ್ದಾರೆ. ದಾವಾ 3 ನೇ ಪ್ಯಾರಾದಲ್ಲಿ ಬಾಳೆಹೊನ್ನೂರು ಪುರಪ್ಪ ಜಗದ್ಗುರು ಎಂದು ಬರೆದಿರುವದು ಸುಳ್ಳಾಗಿರುತ್ತದೆ. ಮತ್ತು ವಿವಾದದ ವಿಚಾರವಾಗಿರುತ್ತದೆ. ಈ ರೀತಿ ಬರೆದಿರುವದನ್ನು ವಾದಿಯು ದಾವೆಯಲ್ಲಿ ವಜಾ ಮಾಡುವಂತೆ ಆರ್ಡರಾಗಬೇಕು. ಅಥವಾ ಇದನ್ನು ಕೋರ್ಟಿನವರೇ ರಿಕಾರ್ಡಿನಿಂದ ತೊಡೆದುಹಾಕತಕ್ಕದ್ದು.

4. ದಾವಾ 4 ನೇ ಪ್ಯಾರಾ ಹೇಳಿಕೆಗಳು ಶುದ್ಧ ಸುಳ್ಳು. 1924 ನೇ ಮೇ ತಿಂಗಳಲ್ಲಾಗಲಿ 1925 ನೇ ಆಕ್ಟೋಬರು ತಿಂಗಳಲ್ಲಾಗಲಿ ಅಥವಾ ಇನ್ಯಾವ ಕಾಲದಲ್ಲಾಗಲಿ ಪ್ರತಿವಾದಿಯು ವಾದಿಗೆ 1300 ಕೊಡಲು ವಾಗ್ದಾನಮಾಡಲಿಲ್ಲ. ಈ ಪ್ಯಾರಾದಲ್ಲಿ ನಮೂದಿರುವ 4-10-25 ನೆ ತಾ|| ನ ಕಾಗದವನ್ನು ಬರೆದು ಕೊಡುವಂತೆ ಏಜಂಟಾ ಲಿಂಗಪ್ಪನಿಗೆ ಪ್ರತಿವಾದಿಯು ಅಧಿಕಾರಕೊಟ್ಟಿರಲಿಲ್ಲ. ಮತ್ತು ಏಜಂಟನ ಅಧಿಕಾರದಲ್ಲಾಗಲಿ ಪ್ರತಿವಾದಿಯು ಮಪ್ಪಿಗೆ ಮತ್ತು ತಿಳುವಳಿಕೆಯಿಂದ ಬರೆಯಲ್ಪಟ್ಟಿಲ್ಲ. ಈ ಕಾಗದವನ್ನು ತನ್ನ ಏಜಂಟಾ ಬರೆದುಕೊಟ್ಟಿದ್ದಾಗ್ಯೂ ಅದಕ್ಕೆ ಪ್ರತಿವಾದಿಯು ಬದ್ಧರಲ್ಲವೆಂದು ದೃಢವಾಗಿ ಹೇಳುತ್ತಾರೆ. ಏಜಂಟಾ ಸದರಿ ಕಾಗದವನ್ನು ಬರೆದು ಕೊಟ್ಟೇ ಇಲ್ಲ. ವಾದಿಯು ಏನಾದರೂ ಪ್ರತಿಫಲವನ್ನು ಹೊಂದಬೇಕೆಂಬ ದುರುದ್ದೇಶದಿಂದ ಈ ಕಾಗದವನ್ನು ಸೃಷ್ಟಿಸಿ ಮಾಡಿದ್ದಾರೆ. ಕಾಗದದ ಬರವಣಿಗೆಯಲ್ಲೂ ಸಾಕ್ಷಿಗಳ ರುಜುಗಳಿಗೂ ಬೇರೆ ಬೇರೆ ಮಸಿಯನ್ನು ಉಪಯೋಗಿಸಿರುತ್ತಾಗಿ ಇದು ಸೃಷ್ಟಿಸಿದ್ದಾಗಿರುತ್ತೆ.

5. ವಾದಿಯು ಹಕ್ಕು ಸುಳ್ಳಾಗಿರುತ್ತೆ. ಇಂಥಾ ಕಾಗದವಿರತಕ್ಕ ವಿಚಾರದಲ್ಲಾಗಲಿ ಅಥವಾ 1926 ನೆ ಫೆಬ್ರವರಿ ತಿಂಗಳಿಗೆ ವಾಯಿದೆ ಆಗುತ್ತಾವಾಗ್ಯೂ ತನಗೆ ಬರಬೇಕಾದ ಹಣದ ವಿಚಾರದಲ್ಲಾಗಲಿ 4-10-1925 ರ ತರುವಾಯ ವಾದಿಯು ಬರೆದಿರತಕ್ಕ ಕಾಗದಗಳಲ್ಲಿ ಒಂದಕ್ಷರವೂ ಇಲ್ಲ. ಪ್ರತಿವಾದಿಯನ್ನು ಸಾಲಕೊಡಬೇಕೆಂದು ಪದೇ ಪದೇ ಬೇಡಿದನು ಮತ್ತು ಅಪ್ಪಿ ಮಠದ ವಿಚಾರದಲ್ಲಿ ಈತನು ಮಾಡಿದ ಸಹಾಯಕ್ಕಾಗಿ ಈತನಿಗೆ ಪೂರಾ ಪ್ರತಿಫಲವಾಗಿ 300 ರೂ. ಗಳನ್ನು ಕೊಟ್ಟಮೇಲೆ ಹೆಚ್ಚಿಗೆ ಹಣವನ್ನು ಕೊಡುವುದಿಲ್ಲವೆಂದು ಹೇಳಿದ್ದರಿಂದ ವಾದಿಯು ಈರೀತಿ ಸುಳ್ಳು ಕಾಗದವನ್ನು ಸೃಷ್ಟಿಸಿ ಮಾಡಿರುತ್ತಾನೆ.

6. ಈ ಕಾಗದದಲ್ಲಿ ನಮೂದಿರುವ ಏಟಂಗಳಿಗೆ ವಾದಿಗೆ ಪ್ರತಿಫಲ ಕೊಡುವದಾಗಿ ಪ್ರತಿವಾದಿಯು ವಾಗ್ದಾನಮಾಡಲಿಲ್ಲ.

7. ದಾವಾ 5-6-7 ನೇ ಪ್ಯಾರಾ ಹೇಳಿಕೆಗಳೆಲ್ಲಾ ಶುದ್ಧ ಸುಳ್ಳು ಮತ್ತು ಆಕಾಶಪುರಾಣವಾಗಿರುತ್ತೆ. ಪ್ರತಿವಾದಿಯು ಬಡ್ಡಿ ಕೊಡಲು ಬದ್ಧನಲ್ಲ: ಇದು ಸುಳ್ಳು.

8. ಪ್ರತಿವಾದಿಯ ಮೇಲೆ ವ್ಯಾಜ್ಯಕಾರಣವಿರುವದಿಲ್ಲ. ಮತ್ತು 10-5-24 ಯಾ, 13-8-24 ಯಾ, 4-10-25 ನೇ ತಾರೀಖುಗಳಲ್ಲಾಗಲಿ ಅಥವಾ ಬೇರೆಕಾಲದಲ್ಲಾಗಲಿ ವ್ಯಾಜ್ಯಕಾರಣ ಹುಟ್ಟಿದ್ದು ಸುಳ್ಳು.

9. ವಾದಿಯು ನೋಟೀಸು ಖರ್ಚಿಗೆ ಆಗಲಿ ಬಾರು ಖರ್ಚಿಗೆ ಆಗಲಿ ಅರ್ಹನಲ್ಲ.

10. ವಾದಿಯ ದಾವೆಯನ್ನು ಪ್ರತಿವಾದಿಯ ಖರ್ಚುಸಹಿತ ವಜಾಮಾಡಿಸಲು ಪ್ರತಿವಾದಿಯು ಪ್ರಾರ್ಥನೆ.

ವಾದಿಯ ರಿಪ್ಲೈ

1 ತಕರಾರು 4 ನೇ ಪ್ಯಾರಾ ಹೇಳಿಕೆಗಳು ಶುದ್ಧ ಸುಳ್ಳು ಮತ್ತು ಮೋಸಕರವಾಗಿವೆ. ಪ್ರತಿವಾದಿಯಿಂದ ಜನರಲ್ ಪವರ್ ಪಡೆದಿರುವ ಏಜಂಟನು ಪ್ರತಿವಾದಿಯ ಸೂಚನಾ (ಇನ್‌ಸ್ಟ್ರಕ್ಷನ್) ಪ್ರಕಾರ ಮತ್ತು ಪ್ರತಿವಾದಿಯ ಪೂರ್ಣ ಒಪ್ಪಿಗೆಯಿಂದ ಮತ್ತು ತಿಳುವಳಿಕೆಯಿಂದ 4-10-25 ನೇ ತಾರೀಖಿನ ಕಾಗದವನ್ನು ವಾದಿಗೆ ಬರೆದುಕೊಟ್ಟಿರುವನಲ್ಲದೆ ಇದನ್ನು ಪ್ರತಿವಾದಿಯು ಅಂಗೀಕರಿಸಿರುತ್ತಾರೆ. ಆದ್ದರಿಂದ ಪ್ರತಿವಾದಿಯು ಈ ಕಾಗದಕ್ಕೂ ಒಪ್ಪಂದಕ್ಕೂ ಬದ್ಧನಾಗಿದ್ದಾನೆ. ವಾದಿಯು ಈ ಕಾಗದವನ್ನು ಸೃಷ್ಟಿಸಿ ಮಾಡಿರುತ್ತಾನೆಂದು ನಂತಾದ ಆ 4 ನೇ ಪ್ಯಾರಾದ ಹೇಳಿಕೆಗಳೆಲ್ಲಾ ಸುಳ್ಳು ಮತ್ತು ಜವಾಬ್ದಾರಿಯನ್ನು ತಪ್ಪಿಸಿಕೊಳ್ಳಲು ಮಾಡಿರತಕ್ಕ ಪ್ರಯತ್ನವಾಗಿರುತ್ತೆ. 4-10-25 ನೇ ತಾರೀಖಿನ ಈ ಕಾಗದವು ನಿಜವಾದದ್ದು; ಸ್ಪಷ್ಟವಾ ಇಲ್ಲ; ದಾವಾ 4 ನೇ ಪ್ಯಾರಾದಲ್ಲಿ ನಮೂದಿರುವಂತೆ ವಾದಿಗ 1300 ರೂಪಾಯಿಗಳನ್ನು ಕೊಡಲು ಪ್ರತಿವಾದಿಯು ಒಪ್ಪಿದ್ದನೆಂದು ವಾದಿಯು ಒತ್ತಿ ಹೇಳುತ್ತಾನೆ.

2. ತಕರಾರು 5 ನೇ ಪ್ಯಾರಾದ ಹೇಳಿಕೆ ನಿಜವಲ್ಲ, ಒಪ್ಪಂದದ ಹಣಕ್ಕೆ ಇದಾಗ್ಗೆ ತಗಾದೆ ಮಾಡಿರುತ್ತೆ; ವಾದಿಯು ಕೆಲಸಮಾಡಿದ್ದಕ್ಕೆ ವಾದಿಗೆ ಕೊಡಬೇಕಾದ ಹಣದ ವ್ಯವಸ್ಥೆಯನ್ನು ಪ್ರತಿವಾದಿಯು ಇಷ್ಟಕ್ಕೆ ವಾದಿ ಒಪ್ಪಿಸಿದ್ದದ್ದು ಸುಳ್ಳು. ಮತ್ತು 300 ರೂಪಾಯಿಗಳು ಸಹಾ ಹೆಚ್ಚಾಯಿತೆಂದು ನ್ಯಾಯವಾಗಿರುತ್ತದೆಂದು ನಮೂದಿಸಿರುವದು ಸುಳ್ಳು; ಅಪ್ಪಿಮಠದ ಸಂಬಂಧವಾಗಿ ಎರಡು ವ್ಯವಹಾರಗಳು ಹುಟ್ಟಿ ಮಹತ್ವವಾದ ಧಾರ್ಮಿಕವಿಷಯಗಳ ಜರ್ಜರಿಯುಂಟಾಗಿದ್ದವಲ್ಲದೆ 60,000 ಸಾವಿರ ರೂಪಾಯಿಗೆ ಹೆಚ್ಚಾಗಿ ಬೆಲೆಬಾಳುತ್ತಿದ್ದ ಅಪ್ಪಿಮಠದ ಆಸ್ತಿಯನ್ನು ಸರಕಾರಕ್ಕೆ ಸೇರಿಸಿಕೊಳ್ಳಬೇಕೆಂಬ (escheat) ವಿವಾದವು ಉಂಟಾಗಿತ್ತು. ಆ ವ್ಯಾಜ್ಯದಲ್ಲಿ ವಾದಿಯು ಮಾತ್ರ ಸಹಾಯ ಮಾಡಲಿಲ್ಲ. ವ್ಯಾಜ್ಯದ ವಿಶಿಷ್ಟ ನಡವಳಿಕೆಯು ವಾದಿಗೆ ವಹಿಸಲ್ಪಟ್ಟಿತ್ತು. ವಾದಿಯು ಹಗಲುರಾತ್ರಿಯನ್ನದೆ ತನ್ನ ಉದ್ಯೋಗದಲ್ಲಿ ಉಂಟಾದ ನಷ್ಟವನ್ನು ಗಮನಿಸದೆ ಮತ್ತು ತನಗೆ ಇತರ ಭಾಗಗಳಲ್ಲೂ ಉಂಟಾದ ಎಲ್ಲಾ ಕಷ್ಟನಷ್ಟಗಳನ್ನು ಲಕ್ಷಿಸದೆ ಕೆಲಸಮಾಡಿದನು. ಆದ್ದರಿಂದ ವಾಗ್ದಾನಮಾಡಿದ 1000 ರೂಪಾಯಿಗಳು ಸಹ ಸಾಲದೆಂದು ಪ್ರತಿವಾದಿಗೆ ತಿಳಿಸಿದ್ದಾನೆ. ಈ ಅಪ್ಪಿಮಠದ ವಿವಾದಗಳಲ್ಲಿ ವಾದಿಯು ಮಾಡಿರುವ ಕೆಲಸಗಳಿಗೆ ಈ 300 ರೂಪಾಯಿಗಳು ಕೇವಲ ಕಮ್ಮಿಯಾಗಿರುತ್ತೆಂದು ಮತ್ತು ಸಾಕಾಗುವುದಿಲ್ಲವೆಂದು ಪ್ರತಿಪಾದಿಸುವದಲ್ಲದೆ ತನಗೆ ಬರಬೇಕಾದ ಪೂರ್ಣ ಪ್ರತಿಫಲಕ್ಕಾಗಿ ಇಷ್ಟುಮಾತ್ರವನ್ನೇ ತೆಗೆದುಕೊಳ್ಳುವದಿಲ್ಲವೆಂದು ವಾದಿಯು ತಕರಾರುಮಾಡಿ ತಿರಸ್ಕರಿಸಿರುತ್ತಾನೆ.

3. ಸಾಲಾ ಕೇಳಿದ ವಿಚಾರಕ್ಕೂ ಈ ದಾವಾಕ್ಕೂ ಯಾವ ಸಂಬಂಧವೂ ಇಲ್ಲ; ದಾವಾ ಕರಾರಿಗೆ ಹಿಂದೆಯೇ ಸಾಲದ ವಿಚಾರವು ವ್ಯವಸ್ಥೆಯಾಗಿರುತ್ತದೆ. ಈ ಸಾಲದ ವಿಚಾರವು ವ್ಯವಸ್ಥೆಯಾದ ತರುವಾಯ ವಾದಿಯು ಅಪ್ಪಿಮಠದ 2 ನೇ ವ್ಯಾಜ್ಯದಲ್ಲಿ ಕೆಲಸ ಮಾಡಿರುತ್ತಾನೆ. ಕಾರಣ, ಉಭಯರ ಈ ನಡವಳಿಕೆಯಿಂದಲೇ ಈ ಸಾಲದ ವಿಚಾರದಿಂದ ವಾದಿಗೆ ಈ ದಾವಾಸಂಬಂಧವಾಗಿ ಯಾವ ವಿರೋಧವೂ ಇರುವುದಿಲ್ಲವೆಂದು ವ್ಯಕ್ತಪಡುತ್ತೆ.

4. ಪ್ರತಿವಾದಿಯು 4-10-25 ನೇ ತಾ|| ನ ಕಾಗದದಲ್ಲಿ ಒಪ್ಪಿದಂತೆ ಬಡ್ಡಿಯನ್ನು ಕೊಡಲು ಬದ್ಧನಾಗಿರುತ್ತಾನೆ. ತಕರಾರು 7 ನೇ ಪ್ಯಾರಾದ ಕಡೇ ಹೇಳಿಕೆಗೆ ಅಡಿಷನಲ್ ಸ್ಟೇಟ್‌ಮೆಂಟ್ 6 ನೇ ಪ್ಯಾರಾದ ಹೇಳಿಕೆಗಳು ಪರಸ್ಪರ ವಿರುದ್ಧವಾಗಿಯೂ, ಅಸಂಬದ್ಧವಾಗಿಯೂ ಇರುತ್ತವೆ

5. ತಕರಾರು 4-5 ನೇ ಪ್ಯಾರಾದ ಹೇಳಿಕೆಗಳು ಪರಸ್ಪರ ವಿರೋಧವಾಗಿಯೂ, ಅಸಂಬದ್ಧವಾಗಿಯೂ ಇರುತ್ತವೆ.

6. ದಾವಾದಲ್ಲಿ ನಮೂದಿಸಿರುವಂತೆ ಪ್ರತಿವಾದಿಯ ಮೇಲೆ ವ್ಯಾಜ್ಯಕಾರಣವಿರುತ್ತೆ. ತಕರಾರು 8 ನೇ ಪ್ಯಾರಾದ ಹೇಳಿಕೆ ನಿಜವಲ್ಲ.

7. ನಿಯಮಿತವಾಗಿದ್ದ ವಾಯಿದೆಯಲ್ಲಿ ಪ್ರತಿವಾದಿಯು ಒಪ್ಪಂದವನ್ನು ನೆರವೇರಿಸಲಿಲ್ಲವಾಗಿ ವಾದಿಯು ತನಗೆ ಸಲ್ಲಬೇಕಾದ ಹಣಕ್ಕೋಸ್ಕರ ಪ್ರತಿವಾದಿಗೆ ತಗಾದೆ ನೋಟೀಸನ್ನೂ ತಾರನ್ನೂ ಸಹ ಕೊಡಲೇಬೇಕಾಯಿತು. ಕಾರಣ, ಈ ಖರ್ಚನ್ನು ಪ್ರತಿವಾದಿಯು ವಾದಿಗ ತೆರಬೇಕಾಗಿರುತ್ತದೆ.

8. 1 ಶ್ರೀ ರೇವಣಾರಾಧ್ಯ, (ಶ್ರೀ ರೇಣುಕಶಿವಾಚಾರ್ಯ) 2 ಶ್ರೀ ಮರುಳಾರಾಧ್ಯ, (ಶ್ರೀ ದಾರುಕಶಿವಾಚಾರ್ಯ) 3 ಶ್ರೀ ಏಕೋರಾಮಾರಾಧ್ಯ, 4 ಶ್ರೀ ಪಂಡಿತಾರಾಧ್ಯ, 5 ಶ್ರೀ ವಿಶ್ವಾರಾಧ್ಯರೆಂಬ ಪಂಚಾಚಾರ್ಯರು ವೀರಶೈವಮತವನ್ನು ಸ್ಥಾಪನೆಮಾಡಿ ತಮ್ಮ ಮತಸ್ಥಾಪಕ ಆಚಾರ್ಯಪೀಠಗಳನ್ನು ಭರತಖಂಡದಲ್ಲಿ 1 ಶ್ರೀ ರಂಭಾಪುರಿ (ಬಾಳೆಹೊನ್ನೂರು) 2 ಶ್ರೀ ಉಜ್ಜಯಿನಿ, 3 ಶ್ರೀ ಹಿಮವತ್ಕೇದಾರ, 4 ಶ್ರೀಶೈಲ, 5 ಶ್ರೀ ಕಾಶೀಕ್ಷೇತ್ರಗಳಲ್ಲಿ ಸ್ಥಾಪನೆ ಮಾಡಿರುತ್ತಾರೆ. ಮತಸ್ಥಾಪಕರಾದ ಈ ಪಂಚಾಚಾರ್ಯರು ಇವರ ಪರಂಪರಾಗತರಾದ ಮಹದಾಚಾರ್ಯರು ಸಹ ಈ ವೀರಶೈವ ಮತಕ್ಕೆ ಜಗದ್ಗುರುಗಳಾಗಿರುತ್ತಾರೆ. ಪ್ರತಿವಾದಿಯು ಈ ೫ ಮತಸ್ಥಾಪಕ ಆಚಾರ್ಯಪೀಠಗಳಲ್ಲಿ ಯಾವದಕ್ಕೂ ಸೇರಿದವನಲ್ಲ. ಮತ್ತು ಪ್ರತಿವಾದಿಯು ಜಗದ್ಗುರುವಲ್ಲ! ಪ್ರತಿವಾದಿಯು ಸ್ವತಃ ಈ ಪೀಠಗಳಿಗೆ ಶಿಷ್ಯನಾಗಿರುತ್ತಾನೆ. ಪ್ರತಿವಾದಿಯು ವಿರಕ್ತ (ಸನ್ಯಾಸಿ)ಯೇ ಹೊರತು ಅನ್ಯಥಾ ಇಲ್ಲ. (ಸನ್ಯಾಸಿ) ವಿರಕ್ತರಲ್ಲದವರಿಗೆ ಈತನು ಗುರುವೇ ಅಲ್ಲ. ಪ್ರತಿವಾದಿಯು ಹೇಳಿಕೊಂಡಿರುವಂತೆ ಮಹಾರಾಜನಲ್ಲ! ಇದು ಪ್ರತಿಯೊಬ್ಬ ಮಾನವಪ್ರಾಣಿಯ ಸಾಮಾನ್ಯಬುದ್ಧಿಗೂ ಸಹ ಗೊತ್ತಾಗುತ್ತೆ. ಸರ್ವಸಂಗಪರಿತ್ಯಾಗಿಯಾಗಿ ವಿರಕ್ತ (ಸನ್ಯಾಸಿ) ಯಾಗಿರುವ ಈ ಪ್ರತಿವಾದಿಯು ಈ ಸಮಸ್ತ ಲೌಕಿಕಾಡಂಬರಗಳಿಂದ ಪರಿವೇಷ್ಟಿಸಿಕೊಳ್ಳಲು ಪ್ರಯತ್ನಿಸುತ್ತಿರುವದು ಆಶ್ಚರ್ಯಕರವಾಗಿದೆ. ಪ್ರತಿವಾದಿಯು ದಾವಾದಲ್ಲಿ ಬರೆದಿರುವದಕ್ಕಿಂತಲೂ ಲೇಶವೂ ಹೆಚ್ಚಾಗಿಲ್ಲ. ಮತ್ತು ಆ ದಾವಾ ವಿವರಣೆಯು ಮೊಕದ್ದಮೆಯ ವಿದ್ಯಮಾನಗಳನ್ನು ಯಾವ ವಿಧದಲ್ಲೂ ಬಾಧಿಸುವದಿಲ್ಲ. ಪ್ರತಿವಾದಿಯು ಆಲೋಚಿಸುವಂತೆ ಜನಸಾಮಾನ್ಯರ ದೃಷ್ಟಿಯಲ್ಲಿ ಅಲ್ಪನಾಗಿದ್ದೇನೆಂದು ಪ್ರತಿವಾದಿಗೆ ತೋರಿದರೆ ಆ ಬಗ್ಗೆ ಆತನ ಪರಿಹಾರವು ಪ್ರತ್ಯೇಕವಾಗಿರುತ್ತೆ. ದಾವಾದಲ್ಲಿ ಪ್ರತಿವಾದಿಯ ಹೆಸರನ್ನು ಬದಲಾಯಿಸಲು ವಾದಿಗೆ ಕಾರಣವಾಗಲಿ ಅವಶ್ಯವಾಗಲಿ ಇಲ್ಲ. ಆ ರೀತಿ ಬದಲಾವಣೆಮಾಡಲು ವಾದಿಯು ಒಪ್ಪುವದಿಲ್ಲ.

9. ಮುರಗಿಸ್ವಾಮಿಯು (ಪಂಗಡ) ವಿಲ್ಲವೆನ್ನುವದು ಅಸತ್ಯವಾದದ್ದು. ವಿರಕ್ತರಲ್ಲಿ 4-5 ಸಮುಯಗಳು ಅಂದರೆ ಭೇದಗಳಿರುತ್ತವೆ. (ಇವು ಶಾಸ್ತ್ರಸಿದ್ಧವಲ್ಲ) ಈ ಭೇದಗಳಲ್ಲಿ ಒಂದಾದ ಮುರಗಿಯೆಂಬ ಪಂಗಡಕ್ಕೆ ಪ್ರತಿವಾದಿಯು ಸೇರಿರುತ್ತಾನೆ ಎನ್ನುವದು ಮತ್ತು ಮುರಗಿಸಮುಯವಿರುತ್ತೆನ್ನುವದು ಸಹ ಈ ಪ್ರತಿವಾದಿಯ ಹೆಸರಿನಿಂದಲೇ ಸ್ಪಷ್ಟವಾಗಿರುತ್ತೆ. ಪ್ರತಿವಾದಿಯಂತೆ ಮುರಗಿಪಂಗಡಕ್ಕೆ ಸೇರಿದ ಮಠದವರು ಅನೇಕರಿರುತ್ತಾರೆ. ಈ ಮುರಗಿಮಠವು ಬಹಳ ಈಚೆಗೆ ಕಟ್ಟಲ್ಪಟ್ಟದ್ದಾಗಿರುತ್ತೆ. ಇಂಥ ನೂತನವಾದ ಮತ್ತು ಪ್ರತಿವಾದಿಯು ಅಧಿಕಾರಿಯಾಗಿರುವ ಮುರಗಿಮಠವು ಅನಾದಿಕಾಲದಿಂದಲೂ ಇರುವ ಎಲ್ಲಾ ವೀರಶೈವಮತಗಳಿಗೂ ಮತ್ತು ಪೀಠಗಳಿಗೂ ಅತಿ ಮುಖ್ಯಧಾರ್ಮಿಕ ಗುರುಪೀಠವೆನ್ನುವದು ಹಾಸ್ಯಾಸ್ಪದವಾಗಿರುತ್ತೆ. ಯಾವ ಶಿವಾಗಮಗಳೂ ಈ ಮುರಗಿಮಠದ ವಿಚಾರವನ್ನು ಪ್ರತಿಪಾದಿಸುವದಿಲ್ಲ! ಶಿವಾಗಮಗಳ್ಯಾವವೂ ಈತನಿಗೆ ಯಾವ ಬಿರುದುಗಳನ್ನು ವಿಧಿಸಿಲ್ಲ. ಮತ್ತು ಪ್ರತಿವಾದಿಯ ಹೆಸರನ್ನು ಆತನು ಅಪೇಕ್ಷಿಸುವಂತೆ ಬರೆಯಬೇಕೆಂದ ಯಾವ ಧರ್ಮಗ್ರಂಥಗಳೂ ಶಾಸನಮಾಡಿರುವದಿಲ್ಲ.

10. ಶ್ರೀ ಬಾಳೆಹೊನ್ನೂರು ಪೀಠವು ಇಡೀ ವೀರಶೈವ ಜನಾಂಗಕ್ಕೆ ಪರಮಜಗದ್ಗುರು ಪೀಠವಾಗಿರುತ್ತೆ. ಈ ನಿಜಸಂಗತಿಯನ್ನು ವಾದಿಯು ತನ್ನ ದಾವೆಯಲ್ಲಿ ಬಂಡಿತವಾಗಿಯೂ ತೆಗೆದುಹಾಕುವುದಿಲ್ಲ. ಅನೇಕ ಪ್ರಸಿದ್ಧರೂ ತಪಸ್ವಿಗಳೂ ಆಗಿದ್ದ ವಿರಕ್ತರು ಮತ್ತು ಈ ಪ್ರತಿವಾದಿಯ ಮಠದ ಕೆಲವು ಹಿಂದಿನ ಸ್ವಾಮಿಗಳು ಸಹ ಈ ಜಗದ್ಗುರು ಪೀಠವನ್ನು ಮತ್ತು ಈ ಆಚಾರ್ಯಪೀಠವನ್ನು ಸ್ಥಾಪನೆಮಾಡಿದ (ಶ್ರೀ ರೇಣುಕಶಿವಾಚಾರ್ಯ) ಭಗವತ್ಪಾದರವರನ್ನು ಸಹ ಪರಮಜಗದ್ಗುರುಗಳೆಂದು ಸ್ತೋತ್ರಮಾಡಿರುತ್ತಾರೆ. ಈ ಕಾರಣದಿಂದ ಈ ಮಹಾಪೀಠವನ್ನು ಪರಮಜಗದ್ಗುರುವಲ್ಲವೆಂದು ಹೇಳಲಿಕ್ಕೆ ಪ್ರತಿವಾದಿಯು ನಿರೋಧಿಸಲ್ಪಟ್ಟಿದ್ದಾನೆ. (Estop) ಪ್ರತಿವಾದಿಯು ಈ ನಿಜಯಗಳನ್ನು ಚನ್ನಾಗಿ ತಿಳಿದಿದ್ದಾಗ್ಯೂ ಈ ಗುರುಸಾರ್ವಭೌಮರ ಪೀಠವನ್ನು ಮತ್ತು ಆ ಪೀಠದ ಗುರುವರ್ಯರನ್ನು ಜಗದ್ಗುರುಗಳಲ್ಲವೆಂದು ಹೇಳಿರುವುದು ಅತ್ಯಂತ ವಿಷಾದಕರವಾಗಿರುತ್ತೆ. ಪ್ರತಿವಾದಿಯು ಜಗದ್ಗುರುತ್ವದ ವಿಷಯದಲ್ಲಿ ಸಂಶಯಾವಿಷ್ಟನಾಗಿರುತ್ತಾನೆಂಬ ವಿಷಯವು ಪ್ರತಿವಾದಿಯ ಸ್ಟೇಟ್‌ಮೆಂಟಿನಿಂದಲೇ ಸ್ಪಷ್ಟವಡುತ್ತೆ.

[೬ನೇ ಪುಟವನ್ನು ನೋಡಿ]